# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ

| ಸಂಘದ ಸದಸ್ಯರಾಗಿ | |
|---|---|
| ಮಹಾ ಪೋಷಕರು | – ₹ 25,000/– |
| ಪೋಷಕರು | – ₹ 5,000/– |
| ಸದಸ್ಯತ್ವ | – ₹ 1,000/– |
| ವಾರ್ಷಿಕ ನಿರ್ವಹಣೆ | – ₹ 500/– |

ಸಂಪುಟ : 14 ಸಂಚಿಕೆ : 1 ಖಾಸಗಿ ಪ್ರಸಾರಕ್ಕಾಗಿ ಜನವರಿ–ಮಾರ್ಚ್ 2023

E-mail : queries@mmdbs.in magazines@mmdbs.in web : www.mmdbs.in


## ನಾಗಾರಾಧನೆ ವಿಶೇಷಾಂಕ



## ಅಧ್ಯಕ್ಷರ ನುಡಿ

"ಬೃಹಚ್ಚರಣ"ದ ಇತ್ತೀಚಿನ ಸಂಚಿಕೆ ಇದೀಗ ನಿಮ್ಮ ಕೈಸೇರಿದೆ. ಈ ಆವೃತ್ತಿಯು ನಿಮಗೆ ಮೆಚ್ಚುಗೆಯಾಗುತ್ತದೆಂದು ನಂಬಿದ್ದೇನೆ.

"ಸಾಂತ್ವನ ನಿಧಿ" ಬಗ್ಗೆ ಮಾಹಿತಿ ಮತ್ತು ಅನಿಸಿಕೆಗಳನ್ನು ಈ ಸಂಚಿಕೆಯ ಒಳಪುಟದಲ್ಲಿ ನಿಮ್ಮೊಡನೆ ಹಂಚಿಕೊಂಡಿದ್ದೇನೆ.

ಈ ವರ್ಷದ ಜುಲೈ 23 ಭಾನುವಾರದಂದು 2022–23ರ ಸರ್ವಸದಸ್ಯರ ಸಭೆಯನ್ನು ನಡೆಸಲು ಕಾರ್ಯಕಾರಿ ಸಮಿತಿಯು ನಿರ್ಧರಿಸಿದೆ. ಈ ಸಭೆಯಲ್ಲಿ ಎಲ್ಲ ಸದಸ್ಯರ ಪಾಲ್ಗೊಳ್ಳುವಿಕೆಯನ್ನು ಕೋರುತ್ತೇನೆ.

ದಿನಾಂಕ 25.04.2023 ಮಂಗಳವಾರದಂದು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಂಜೆ 6.30ಕ್ಕೆ ಶ್ರೀ ಶಂಕರ ಜಯಂತಿಯ ಶುಭ ಸಂದರ್ಭದಲ್ಲಿ ನಿಮ್ಮೆಲ್ಲರ ಭೇಟಿಯಾಗುವುದೆಂದು ಆಶಿಸುತ್ತೇನೆ.



ಸದಸ್ಯರು ವಾರ್ಷಿಕ ನಿರ್ವಹಣಾ ವೆಚ್ಚವನ್ನು ಪಾವತಿಸಬೇಕೆಂದು ಕೋರುತ್ತೇನೆ.

ನೂತನ ಶೋಭಕೃತ್ ಸಂವತ್ಸರದಲ್ಲಿ ಎಲ್ಲರಿಗೂ ಒಳ್ಳೆಯದಾಗಲಿ!

– ಬಿ. ಸುಬ್ರಹ್ಮಣ್ಯಂ, ಅಧ್ಯಕ್ಷರು

## ಕಾರ್ಯದರ್ಶಿ ನುಡಿ

ಸದಸ್ಯರು ಮತ್ತು ಅವರ ಪರಿವಾರಕ್ಕೆ ನಮಸ್ಕಾರಗಳು ಮತ್ತು ಶೋಭಕೃತ್ ಸಂವತ್ಸರದ ಶುಭ ಆಶಯಗಳು.

ದಿನಾಂಕ 24.02.2023ರಂದು ಕಿತ್ತಿಗಾನಹಳ್ಳಿಯ ಶ್ರೀ ನಾಗೇಶ್ವರ ಕ್ಷೇತ್ರದಲ್ಲಿ ನಾಗಾರಾಧನೆಯು ನಮ್ಮ ಸಮುದಾಯದವರ ಸಹಕಾರದೊಡನೆ ಶ್ರದ್ಧಾಭಕ್ತಿಗಳಿಂದ ನೆರವೇರಿತು. ಈ ಕಾರ್ಯದಲ್ಲಿ ಪಾಲ್ಗೊಂಡ ಎಲ್ಲ ಸದಸ್ಯರಿಗೆ ಹಾಗೂ ವಿಶೇಷವಾಗಿ ನಮಗೆ ಎಂದಿನಂತೆ ಸಹಕಾರ ನೀಡಿದ ಶ್ರೀಯುತ ಸೂರ್ಯನಾರಾಯಣ ದೀಕ್ಷಿತರು ಮತ್ತು ಅವರ ಕುಟುಂಬವರ್ಗದವರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳು. ಈ ಸಂದರ್ಭದಲ್ಲಿ ಉದಾರವಾಗಿ ಧನಸಹಾಯ ನೀಡಿದ, ಕುಡಿಯುವ ನೀರು ಹಾಗೂ ಬಾಣಸಿಗರಿಗೆ ವಸ್ತ್ರಗಳನ್ನುಒದಗಿಸಿದ ಪ್ರಾಯೋಜಕರಿಗೆ ಮತ್ತು ಭಕ್ತಾದಿಗಳಿಗೆ ವಂದನೆಗಳು.

ಶ್ರೀ ಶಂಕರ ಜಯಂತಿಯ ಪ್ರಯುಕ್ತ ಬಸವನಗುಡಿಯ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಆವರಣದಲ್ಲಿ ಭಕ್ತಿ ಸಂಕೀರ್ತನಾ ಕಾರ್ಯಕ್ರಮವು ನಡೆಯಲಿದೆ. ಸದಸ್ಯರು ಅಂದು ಆಗಮಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೋರುತ್ತೇನೆ.



ಸಮುದಾಯದ ಎಲ್ಲ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪರೀಕ್ಷೆಗಳಲ್ಲಿ ಯಶಸ್ಸನ್ನು ಹಾರೈಸುತ್ತೇನೆ.

– ಎಸ್.ಸಿ. ಶ್ರೀನಿವಾಸ, ಕಾರ್ಯದರ್ಶಿ

## ಸಂಪಾದಕೀಯ

ಆತ್ಮೀಯ ಸಮುದಾಯ ಬಂಧುಗಳೆ,

**ಚಿಂತನ–ಮಂಥನ:** ಮನುಷ್ಯರು ಯಾವುದೇ ಕರ್ಮ ಮಾಡಿದರೂ ಎರಡು ರೀತಿಯ ಫಲಗಳಿರುತ್ತವೆ; ದೃಷ್ಟ ಫಲ ಮತ್ತು ಅದೃಷ್ಟ ಫಲ. ದೃಷ್ಟ ಫಲವೆಂದರೆ ನಮ್ಮ ಅನುಭವಕ್ಕೆ ಬರಬಹುದಾದ ಫಲಗಳು. ಅದೃಷ್ಟ ಫಲವೆಂದರೆ ಪೂಜೆ, ಜಪ, ತಪ, ಹೋಮ, ಪ್ರದಕ್ಷಿಣೆ, ಯಾತ್ರೆಗಳಿಂದ ಬರುವ ಫಲವು. ಅದು ಅರಿವಿಗೆ ಬರಬೇಕಾದರೆ ನಮಗೆ ಅದಕ್ಕೆ ಅರ್ಹತೆ, ಶ್ರದ್ಧೆ ಮತ್ತು ಭಗವಂತನ ಅನುಗ್ರಹ ಅಗತ್ಯ.



ಲೇಖನಗಳು ಮತ್ತು ಛಾಯಾಚಿತ್ರಗಳನ್ನು ಪತ್ರಿಕೆಯ email magazines@mmdbs.in ಗೆ ಕಳುಹಿಸುವುದು. ಲೇಖನಗಳ ಪ್ರಕಟಣೆ ಸಂಪಾದಕ ಮಂಡಳಿಯ ವಿವೇಚನೆಗೆ ಬಿಟ್ಟದ್ದು.

– ಆರ್. ರಮೇಶ್, ಸಂಪಾದಕರು

## ಸಾಂತ್ವನ ನಿಧಿ – ವಿಚಾರ ವಿನಿಮಯ ಸಭೆ





## 80 ವರ್ಷಗಳ ಸಂಭ್ರಮಾಚರಣೆ



ಹಿರಿಯ ಸದಸ್ಯ ಶ್ರೀ ಕೆ.ಜಿ. ಶ್ರೀನಿವಾಸ್ ಮತ್ತು ಶ್ರೀಮತಿ ಎಸ್. ರುಕ್ಮಿಣಿ ದಂಪತಿಗಳು 80 ವಸಂತಗಳು ಪೂರೈಸಿದ ಸಂದರ್ಭದಲ್ಲಿ ಸಹಸ್ರ ಚಂದ್ರದರ್ಶನ ಶಾಂತಿ ಮತ್ತು ಕನಕಾಭಿಷೇಕ ಕಾರ್ಯಕ್ರಮವನ್ನು ದಿನಾಂಕ 26.11.2022ರಂದು ಬೆಂಗಳೂರಿನಲ್ಲಿ ಆಚರಿಸಿಕೊಂಡರು.

**********************************************************************************************



ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ.ಗುಂಡಪ್ಪ ಮತ್ತು ಶ್ರೀಮತಿ ಲೀಲಾ ಗುಂಡಪ್ಪ ದಂಪತಿಗಳು 80 ವಸಂತ ಪೂರೈಸಿದ ಸಂದರ್ಭದಲ್ಲಿ ಶ್ರೀ ಸತ್ಯನಾರಾಯಣ ಪೂಜೆ ಮತ್ತು ಚಂಡಿ ಹೋಮವನ್ನು ದಿನಾಂಕ 30.1.2023ರಂದು ಬೆಂಗಳೂರಿನಲ್ಲಿ ನೆರವೇರಿಸಿದರು.

ಸಂಘವು ಈ ಹಿರಿಯ ದಂಪತಿಗಳಿಗೆ ಭಗವಂತನ ಪೂರ್ಣ ಅನುಗ್ರಹ ದೊರಕಲೆಂದು ಪ್ರಾರ್ಥಿಸುತ್ತದೆ.

## 50 ವರ್ಷಗಳ ದಾಂಪತ್ಯ



ಬೃಹಚ್ಚರಣ ಸಂಘವು 50 ವರ್ಷಗಳ ದಾಂಪತ್ಯವನ್ನು (06–06–1962) ಪೂರೈಸಿದ ಶ್ರೀಮತಿ ರಾಜಲಕ್ಷ್ಮೀ ರಾಮಚಂದ್ರನ್ ಮತ್ತು ಶ್ರೀ ಟಿ.ಎಲ್. ರಾಮಚಂದ್ರನ್‌ರವರನ್ನು ಗೌರವಿಸಿದ ಸಂದರ್ಭ.

## ಧನ್ಯವಾದಗಳು



ಸಮುದಾಯದ ಹಿರಿಯರಾದ ಶ್ರೀಮತಿ ರುಕ್ಮಿಣಿ ಗಿಣಿಯವರು (ದಿ|| ಕೆ.ಆರ್. ಗಿಣಿಯವರ ಪತ್ನಿ) ಸಂಘಕ್ಕೆ ರೂ. 50000/–ಗಳನ್ನು ಅನ್ನ ಸಂತರ್ಪಣೆಗೆ ಮತ್ತು ರೂ. 50000/–ಗಳನ್ನು ವಿದ್ಯಾನಿಧಿಗಾಗಿ ಉದಾರವಾಗಿ ದೇಣಿಗೆ ನೀಡಿರುತ್ತಾರೆ. ಶ್ರೀಮತಿ ರುಕ್ಮಿಣಿಯವರ ಸಂಘದ ಮೇಲಿನ ಅಭಿಮಾನಕ್ಕಾಗಿ ಸಂಘವು ಅವರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತದೆ.







## ಧನ್ಯವಾದಗಳು

ದಿ|| ಜಾನಕಮ್ಮ ಮತ್ತು ದಿ|| ಗುಂಜೂರು ಶ್ರೀನಿವಾಸಮೂರ್ತಿ ಅವರ ಜ್ಞಾಪಕಾರ್ಥ ಅವರ ಮಗ ಪೋಷಕ ಶ್ರೀ ಜಿ.ಎಸ್. ಸೂರ್ಯನಾರಾಯಣರವರು 25,000 ರೂ.ಗಳನ್ನು ಶಾಶ್ವತ ಅನ್ನ ಸಂತರ್ಪಣೆ ನಿಧಿಗಾಗಿ ನೀಡಿರುತ್ತಾರೆ. ಸಂಘವು ಶ್ರೀಯುತರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ತಿಳಿಸುತ್ತದೆ.

ಶ್ರೀಯುತರು ಶಂಕರಪುರಂ ಬ್ರಾಹ್ಮಣ ಸಂಘದಲ್ಲಿ ಪದಾಧಿಕಾರಿಗಳಾಗಿ 42 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಸಾಮೂಹಿಕ ಉಪನಯನ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

ಇದಕ್ಕಾಗಿ ಈ ವರ್ಷ ಸಂಘದಿಂದ ರೂ. 5000/– ಸಾವಿರಗಳನ್ನು ಗೌರವಪೂರ್ವಕ ಕಾಣಿಕೆ ನೀಡಲಾಯಿತು.

## ಮೈ.ಮಂ.ದ್ರಾ. ಬೃಹಚ್ಚರಣ ಸಂಘ

**(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)**

**ನೂತನ ಕಾರ್ಯಕಾರಿ ಸಮಿತಿ**

**ಶ್ರೀಯುತರುಗಳಾದ**

**ಬಿ. ಸುಬ್ರಹ್ಮಣ್ಯಂ, 9449869667**
ಅಧ್ಯಕ್ಷರು

**ಎಚ್.ಕೆ. ಶಶಿಧರ್, 9845173766**
ಉಪಾಧ್ಯಕ್ಷರು

**ಎಸ್.ಸಿ. ಶ್ರೀನಿವಾಸ, 9483725949**
ಕಾರ್ಯದರ್ಶಿ

**ಅರುಣ್ ವಿ., 9880166001**
ಸಹಕಾರ್ಯದರ್ಶಿ

**ಎಸ್. ಸತ್ಯನಾರಾಯಣ, 9980945699**
ಖಜಾಂಚಿ

**ಟಿ.ಪಿ. ಸೂರ್ಯನಾರಾಯಣ, 9945484268**
ಸಹಖಜಾಂಚಿ

**ಆರ್. ಗಣೇಶ್ ಶ್ರೀಧರ್, 9880187686**
ಆಂತರಿಕ ಲೆಕ್ಕ ಪರಿಶೋಧಕರು

<u>**ಸದಸ್ಯರು**</u>

**ಜಿ.ವೆಂಕಟೇಶ್, 9916067503**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 9482087344**
**ಸರಸ್ವತೀ ನಟರಾಜನ್, 9480619730**
**ನಾಗೇಶ, 9980662118**
**ಕೆ.ಮಂಜುನಾರಾಯಣ್, 9886114279**
**ಕೆ.ಎಸ್. ಅರುಣ್, 9900313929**
**ಕೆ.ಎಸ್. ಅನಂತ, 9740444222**
**ಆರ್.ಎ. ಶ್ಯಾಮಸುಂದರ್, 9845205674**
**ಆರ್. ರಮೇಶ್, 9886034048**
**ಲಲಿತಾ ರಮೇಶ್, 9945199637**
**ಬಿ.ಆರ್. ಅನಿಲ್ ರಮೇಶ್, 9980027189**
**ಬಿ.ಸಿ. ನಟರಾಜ, 9980183181**

<u>ಲೆಕ್ಕಪರಿಶೋಧಕರು</u>

**ಬಿ.ಎನ್. ಗೋವಿಂದ್ ಪ್ರಸಾದ್, 9845128229**

**'ಬೃಹಚ್ಚರಣ' ಪತ್ರಿಕೆಯ ಸಂಪಾದಕ ಮಂಡಳಿ**

ಸಂಘದ **ಅಧ್ಯಕ್ಷರು** ಹಾಗೂ **ಕಾರ್ಯದರ್ಶಿ**

**ಆರ್. ರಮೇಶ್, 9886034048**
ಸಂಪಾದಕರು

**ಲಲಿತಾ ರಮೇಶ್, 9945199637**
ಸದಸ್ಯರು

**ಬಿ.ಆರ್. ಅನಿಲ್ ರಮೇಶ್, 9980027189**
ಸದಸ್ಯರು

**ಎನ್. ಶಿವಕುಮಾರ್, 9886505505**
ಛಾಯಾಗ್ರಾಹಕರು

### ಶೋಭಕೃತುವೇ ಆಗಮಿಸು



ಬದುಕಿನಲಿ ವರುಷ ವರುಷವು
ಬರತಲಿರುವ ಯುಗಾದಿಯೇ
ನವ ಚೈತನ್ಯದ ನವ ಚೇತನವ
ಈ ಶೋಭಕೃತು ಸಂವತ್ಸರವು
ಚೆಲುಮೆಯಂತೆ ತರಲೆಂದು
ಸರ್ವರೂ ಭಗವಂತನಲ್ಲಿ ಬೇಡಿ
ಅವನಾನಂದ ರೂಪುಗೊಂಡಿಹುದಿಲ್ಲಿ
ಕೃತ ಕೃತ್ಯತೆಯನು ಪಡೆಯುತಲಿ
ಎಂದಿನಂತೆ ಮಾವು ಬೇವುಗಳ ಮಿಳಿತ
ವಸಂತದಲ್ಲಿ ಹೊಂಗೆಯ ಟೊಂಗೆಯ
ನಡುವಿನಲ್ಲಿ ಕೋಗಿಲೆಯ ಇಂಚರ
ಸಸ್ಯಶ್ಯಾಮಲೆಯಿಂದ ನಲಿದು ಬರುವ
ಹೂವುಗಳ ಪರಿಮಳಗಳು ನಾಸಿಕಕ್ಕೆ
ಬಂದು ಮನದುಂಬಿ ಮೈಮರೆತು
ಕುಣಿದಾಡುವ ಹುರುಪಿನಲ್ಲಿ ಸರ್ವರಿಗೂ
ಸುಖಿನೋ ಭವಂತು



**ಜಿ.ಎಸ್. ಸತ್ಯಮೂರ್ತಿ**
**9844469581**

*************************************

### ಯುಗಾದಿ



ಬಂತು ಬಂತು ಯುಗಾದಿ
ಹೊಸ ವರುಷಕೆ ಹಾಡಿ ನಾಂದಿ
ಹೊಸ ಹರುಷವ ಹೊತ್ತು
ಹೊಸತು ಹೊಸತು ತರುತ್ತಿದೆ
ಸಲ ಸಲದ ಯುಗಾದಿ
ಕೆಂಪು ಬಿಳಿ ನೀಲಿ ಹಳದಿ
ಸೀರೆಯನ್ನುಟ್ಟ ಸಸ್ಯರಾಶಿಯ ಚೆಲುವು
ಚೈತ್ರಮಾಸದ ವಸಂತೋತ್ಸವಕೆ
ಉತ್ಸಾಹದ ಹುರುಪು, ಬಾಗಿಲಿಗೆ
ತಂದಿದೆ ಹರುಷದ ಹೊಳಪು
ಹೂ ಹೊತ್ತ ಗಿಡಮರಗಳ ಸೊಬಗು
ಮಾವು ಮಲ್ಲಿಗೆಯ ಕಂಪು
ಹೊಂಗೆಯ ತಂಪು, ಬೇವಿನ ಸೊಂಪು
ಶುಕ ಪಿಕಗಳ ಕಲರವದ ಇಂಪು
ತಂದಿಹುದು ಈ ಭೂಮಿಗೆ
ಹೊಸತನದ ಮೆರುಗು
ಮಾವಿನ ತೋರಣ ಬೇವು ಬೆಲ್ಲದ ಸ್ಮರಣ
ಸಲ ಸಲದ ಯುಗಾದಿಗೆ ಹೇಳುವುದು ಶುಭವನ
ಹಳೆಯದೆಲ್ಲಾ ಮರೆಸಿ ಹೊಸದರಲ್ಲಿ ಬೆರೆಸಿ
ಎಂದೆಂದಿಗೂ ಇರಲಿ ಹೀಗೆಯೇ ಯುಗಾದಿ
ಹಿರಿಕಿರಿಯರಲಿ ಬೆರೆತು ಎಲ್ಲರೊಳಗೊಂದಾಗಿ
ನಲಿ ನಲಿಯುತಿರಲು ಯುಗಾದಿ ತರಲಿ
ಎಲ್ಲರ ಹೃದಯದಲಿ ಹರುಷದ ಹೋಳಿ
ಇದು ಶುಭಾಶಯ, ಸರ್ವರಲಿ ತುಂಬಿರಲಿ
ಹೊಸ ಆಶಯ



**ಗಾಯತ್ರಿ ಅಯ್ಯರ್**
**8050539971**

# ನಾಗಾರಾಧನೆ - 2023



ಆನೇಕಲ್ ತಾಲ್ಲೂಕಿನ ಕಿತ್ತಿಗಾನಹಳ್ಳಿಯ ಶ್ರೀ ನಾಗೇಶ್ವರ ಕ್ಷೇತ್ರದಲ್ಲಿ ದಿನಾಂಕ 23.2.2023ರ ಶುಕ್ರವಾರದಂದು (ಫಾಲ್ಗುಣ ಶುದ್ಧ ಪಂಚಮಿ) ನಾಗಾರಾಧನೆಯು ಸಾಂಪ್ರದಾಯಿಕ ರೀತಿಯಲ್ಲಿ ನಡೆಯಿತು. ಬೃಹಚ್ಚರಣ ಸಮುದಾಯದವರಿಂದ ಕ್ಷೇತ್ರದ ಅಶ್ವತ್ಥ ವೃಕ್ಷದ ಕಟ್ಟೆಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ನಾಗಶಿಲೆಗಳಿಗೆ ತನಿ ಎರೆಯುವ ಪೂಜಾ ವಿಧಾನವು ಬೆಳಿಗ್ಗೆ 8ಕ್ಕೆ ಆರಂಭವಾಯಿತು. ಪೂಜೆಯ ನಂತರ ಬ್ರಹ್ಮಚಾರಿಗಳು ಶ್ರೀ ಸುಬ್ರಹ್ಮಣ್ಯ ಸ್ವರೂಪ ಎಂಬ ಪುನೀತ ಭಾವದಿಂದ ಅವರಿಗೆ ಪಾದ ಪೂಜೆ ಮಾಡಿ, ವಸ್ತ್ರ ಮತ್ತು ದಕ್ಷಿಣೆ ಸಹಿತ ತಾಂಬೂಲ ನೀಡಿ ನಮಸ್ಕರಿಸಿ ಧನ್ಯರಾದರು. ಸಮುದಾಯದವರು ಸಾಂಪ್ರದಾಯಿಕ ಉಡುಗೆಯಲ್ಲಿ ಪೂಜೆ ಮಾಡಿದರು.

ಶ್ರೀ ಕ್ಷೇತ್ರ ದೇವತೆಗಳಾದ ಭೂ–ನೀಳಾ ಸಮೇತ ಶ್ರೀನಿವಾಸ, ಶ್ರೀ ವಳ್ಳಿ – ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯ ಸ್ವಾಮಿ, ಗಣಪತಿ, ಗಾಯತ್ರಿ ದೇವಿಗೆ ಅಭಿಷೇಕ, ಪೂಜೆ ನಡೆದು ವಿಶೇಷ ಅಲಂಕಾರಗಳಿಂದ ಕಂಗೊಳಿಸುತ್ತಿತ್ತು. ಈ ಬಾರಿಯ ವಿಶೇಷವೇನೆಂದರೆ, ಬದಲಾದ ನೂತನ ದೇವಾಲಯದಲ್ಲಿ ಶ್ರೀ ವಳ್ಳಿ–ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಪ್ರತಿಷ್ಠಾಪನೆ ಆಗಿರುವುದು ಮತ್ತು  ನವಗ್ರಹಗಳನ್ನು ಸ್ಥಳಾಂತರಿಸಲಾಗಿರುವುದು. ನಾಗಾರಾಧನೆಯ ಹಿಂದಿನ ದಿನ ಇವುಗಳ ಪ್ರತಿಷ್ಠಾಪನೆ ಹಾಗೂ  ಕುಂಭಾಭಿಷೇಕವು ನೆರವೇರಿತ್ತು. ಬೃಹಚ್ಚರಣ ಸಮುದಾಯದವರಿಂದ ಶ್ರೀ ವಳ್ಳಿ–ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯಸ್ವಾಮಿ ಉತ್ಸವ ಮೂರ್ತಿಯನ್ನು ವಾದ್ಯಮೇಳದೊಂದಿಗೆ ಮೆರವಣಿಗೆಯಲ್ಲಿ ತಂದು ಅಶ್ವತ್ಥ ಕಟ್ಟೆಯಲ್ಲಿ ಪೂಜೆಗಾಗಿ ಇರಿಸಲಾಯಿತು. ಈ ಸಂದರ್ಭದಲ್ಲಿ ನಾಗಾರಾಧನೆ, ಅನ್ನ ಸಂತರ್ಪಣೆಗೆ ದೇಣಿಗೆ ನೀಡಿದವರ ಹೆಸರಿನಲ್ಲಿ ಪುರೋಹಿತರಾದ ಶ್ರೀ ಬದರಿನಾಥ್‌ರವರು ಪೂಜೆಗೆ ಸಂಕಲ್ಪ ಮಾಡಿದರು ನಂತರ ಪೂಜೆ, ನೈವೇದ್ಯ ಮತ್ತು ಮಹಾಮಂಗಳಾರತಿ ನೆರವೇರಿತು.

ಪ್ರತೀ ವರ್ಷದಂತೆ ಈ ವರ್ಷವೂ ಸಮುದಾಯದ ರಾಜಾಪುರ ಕುಟುಂಬದವರು ಪಾನಕ, ಕೋಸಂಬರಿ ಮತ್ತು ದಿವಂಗತ ಗೋಪಾಲರಾವ್ ಕುಟುಂಬದವರು ಹುಳಿ ಅವಲಕ್ಕಿಯನ್ನು ಪಾರಂಪರ್ಯವಾಗಿ ಪ್ರಸಾದ ರೂಪವಾಗಿ ಆಯೋಜಿಸಿ, ಭಕ್ತರಿಗೆ ವಿತರಿಸುತ್ತಿರುವುದು ಭಗವಂತನ ಮೇಲೆ ಅವರಿಗಿರುವ ಶ್ರದ್ಧೆ ಮತ್ತು ಭಕ್ತಿಯನ್ನು ತೋರಿಸುತ್ತದೆ.

ಬೆಳಿಗ್ಗೆ ಪೂಜೆಯ ನಂತರ ಭಕ್ತಾದಿಗಳಿಗೆ ಉಪಾಹಾರವನ್ನು ಏರ್ಪಡಿಸಲಾಗಿತ್ತು. ಮಧ್ಯಾಹ್ನ 1 ಗಂಟೆಗೆ ಪ್ರಸಾದ ಭೋಜನ ಪ್ರಾರಂಭವಾಯಿತು. ಕ್ಷೇತ್ರಕ್ಕೆ ಆಗಮಿಸಿದ ಭಕ್ತಾದಿಗಳಿಗೆ, ಸಮುದಾಯದವರಿಗೆ ಸಹಪಂಕ್ತಿ ಭೋಜನವಾಯಿತು. ರಾಜಾಪುರ ಕುಟುಂಬದವರು ಭೋಜನ ಸಮಯದಲ್ಲಿ ಅತ್ಯಂತ ರುಚಿಯಾದ ಎರಡು ಒಬ್ಬಟ್ಟುಗಳನ್ನು ಅಚ್ಚುಕಟ್ಟಾಗಿ ಪ್ಯಾಕ್ ಮಾಡಿ ವಿತರಿಸಿದರು. ಬೃಹಚ್ಚರಣ ಸಂಘದಿಂದ ಎರಡು ವಡೆ ಮತ್ತು ಎರಡು ಲಾಡುಗಳನ್ನು ಪ್ರಸಾದ ರೂಪವಾಗಿ ಭಕ್ತಾದಿಗಳಿಗೆಲ್ಲಾ ಕೊಡಲಾಯಿತು.

ಆಹಾರ ಪ್ರಸಾದ ತಯಾರಿಸಿದ ಬಾಣಸಿಗರಿಗೆ ಈ ವರ್ಷವೂ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು ಸ್ವ–ಇಚ್ಛೆಯಿಂದ ಪಂಚೆ ಮತ್ತು ಶಲ್ಯಗಳನ್ನು ಪ್ರಾಯೋಜಿಸಿದರು.

ಶ್ರೀ ಶೋಭಕೃತ್ ನಾಮ ಸಂವತ್ಸರದ ಪಂಚಾಂಗವನ್ನು ಸಮುದಾಯದವರಿಗಾಗಿ ರಿಯಾಯಿತಿ ದರದಲ್ಲಿ ಮಾರಾಟಕ್ಕೆ ಇಡಲಾಗಿತ್ತು.

ಈ ಬಾರಿ **"ಸಾಂತ್ವನ ನಿಧಿ"** ಸಂಗ್ರಹಣೆಗಾಗಿ ಸಂಘದ ವತಿಯಿಂದ ಹುಂಡಿಯನ್ನು ವಿತರಿಸಲಾಯಿತು.

ಪ್ರತೀ ವರ್ಷವೂ ನಾಗಾರಾಧನೆಯು ಯಾವುದೇ ಅಡೆತಡೆಯಿಲ್ಲದೆ ಸುಸೂತ್ರವಾಗಿ ನಡೆಯಲು ಭಗವಂತನ

## ನಾಗಾರಾಧನೆ - 2023

ಅನುಗ್ರಹದೊಂದಿಗೆ ಕಿತ್ತಿಗಾನಹಳ್ಳಿಯ ನಿವಾಸಿಗಳಾದ ಸಂಘದ ಖಜಾಂಚಿಗಳಾದ ಶ್ರೀ ಎಸ್. ಸತ್ಯನಾರಾಯಣ ಮತ್ತು ಸಂಘದ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ವಿ.ಎಸ್. ಮಣಿಯವರು ಸತತವಾಗಿ ಪೂರ್ಣ ಜವಾಬ್ದಾರಿ ಹೊತ್ತು ಆಸಕ್ತಿಯಿಂದ ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯವಾದುದು. ಭೋಜನ ವೇಳೆಯಲ್ಲಿ ಸಮುದಾಯದ ಸದಸ್ಯರು ಬಾಣಸಿಗರೊಂದಿಗೆ ಆಸ್ಥೆ ವಹಿಸಿ ಬಡಿಸುವ ಸೌಜನ್ಯ ತೋರಿದ್ದನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಇದರಿಂದ ಯಾವುದೇ ತಡೆ ಇಲ್ಲದೆ ಶೀಘ್ರವಾಗಿ ಭೋಜನ ಕಾರ್ಯಕ್ರಮ ಸಂಪನ್ನವಾಗಲು ಸಹಕಾರಿಯಾಯಿತು.

ಅನೇಕ ದಾನಿಗಳು ಉದಾರ ಧನ ಸಹಾಯ ಮಾಡುತ್ತಿರುವುದರಿಂದ ಈ ಅನ್ನದಾನದ ಕಾರ್ಯಕ್ರಮವು ನಿರ್ವಿಘ್ನವಾಗಿ ನೆರವೇರಲು ಸಾಧ್ಯವಾಗುತ್ತಿದೆ. ಈ ಬಾರಿ ಬೃಹಚ್ಚರಣ ಸಂಘದಿಂದ ಅಶ್ವತ್ಥ ಕಟ್ಟೆಯ ಸುತ್ತ ಉಕ್ಕಿನ ಸುರಕ್ಷತಾ ತಡೆ ಮತ್ತು ಗರುಡಗಂಬದ ಸುತ್ತ ಉಕ್ಕಿನ ತಡೆಯನ್ನು ಹಾಕಿಸಿದ್ದುದನ್ನು ಸಮುದಾಯದವರು ಪ್ರಶಂಸಿಸಿದರು.

ಈ ನಾಗಾರಾಧನೆಯು ಯಶಸ್ವಿಯಾಗಿ ನೆರವೇರಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದವರಿಗೆ ಸಂಘವು ಚಿರಋಣಿಯಾಗಿರುತ್ತದೆ.

**ಹೆಚ್.ಆರ್. ಲಲಿತಾ**
9945199637

**********************************************************************************************

## ಕಾರ್ಯಕಾರಿ ಸಮಿತಿಯಲ್ಲಿ ಬದಲಾವಣೆಗಳು

ಕಾರ್ಯಕಾರಿ ಸಮಿತಿಯ ಕೆಳಕಂಡ ಸದಸ್ಯರು ವೈಯುಕ್ತಿಕ ಕಾರಣಗಳಿಂದಾಗಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸುವುದು ಸಾಧ್ಯವಾಗುತ್ತಿಲ್ಲವಾದ್ದರಿಂದ ತಮ್ಮನ್ನು ಆ ಜವಾಬ್ದಾರಿಯಿಂದ ಬಿಟ್ಟುಕೊಡಬೇಕೆಂದು ಮನವಿ ಸಲ್ಲಿಸಿರುತ್ತಾರೆ.

1. ಶ್ರೀ ಅನಿಲ್ ರಮೇಶ್
2. ಶ್ರೀ ನಟರಾಜ ಬಿ.ಸಿ.
3. ಶ್ರೀಮತಿ ಸರಸ್ವತಿ ನಟರಾಜನ್

ಕಾರ್ಯಕಾರಿ ಸಮಿತಿಯು ಸದಸ್ಯರ ಕೋರಿಕೆಯನ್ನು ಸೌಹಾರ್ದಪೂರ್ವಕವಾಗಿ ಪರಿಶೀಲಿಸಿ ಮನ್ನಿಸಿದೆ. ಸಮಿತಿಯು ಈ ಸದಸ್ಯರು ಸಂಘಕ್ಕೆ ಸಲ್ಲಿಸಿರುವ ನಿಸ್ಪೃಹ ಸೇವೆಗಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ವ್ಯಕ್ತಪಡಿಸುತ್ತದೆ.

**ಹೊಸ ಸದಸ್ಯರ ಸೇರ್ಪಡೆ**

ಈ ಹಿನ್ನೆಲೆಯಲ್ಲಿ, ಸಂಘದ ಕಾರ್ಯ ಚಟುವಟಿಕೆಗಳು ಸುಸೂತ್ರವಾಗಿ ಮುನ್ನಡೆಯಲು ಕೆಳಕಂಡ ಸದಸ್ಯರನ್ನು ಕಾರ್ಯಕಾರಿ ಸಮಿತಿಗೆ co-opt ಮಾಡಿಕೊಳ್ಳಲು ನಿರ್ಧರಿಸಲಾಯಿತು. ಇದಕ್ಕೆ ಈ ಸದಸ್ಯರ ಒಪ್ಪಿಗೆ ಪಡೆದುಕೊಂಡು ಅವರನ್ನು 05/02/2023 ರಂದು ನಡೆದ ಸಭೆಯಲ್ಲಿ ಹಾರ್ದಿಕವಾಗಿ ಸ್ವಾಗತಿಸಿ co-opt ಮಾಡಿಕೊಳ್ಳಲಾಯಿತು.

1. ಶ್ರೀ ಎನ್. ಶಿವಕುಮಾರ್, ಸದಸ್ಯರು
2. ಶ್ರೀ ಆರ್.ಪಿ. ರವಿಶಂಕರ್, ಪೋಷಕರು
3. ಶ್ರೀ ಎಸ್. ಸೋಮಸುಂದರ, ಪೋಷಕರು

ಈ ವರ್ಷ ನಡೆಯಲಿರುವ ಸರ್ವಸದಸ್ಯರ ಸಭೆಯಲ್ಲಿ ಈ ಬದಲಾವಣೆಗಳು ಸಭೆಯ ಅನುಮೋದನೆಯೊಂದಿಗೆ ಔಪಚಾರಿಕವಾಗಿ ಜಾರಿಗೆ ಬರುತ್ತವೆ.

**ಬಿ. ಸುಬ್ರಹ್ಮಣ್ಯಂ**
**ಅಧ್ಯಕ್ಷರು**

# ಸಾಂತ್ವನ ನಿಧಿ



ಸಂಘದ ಎಲ್ಲ ಸದಸ್ಯರಿಗೆ ಆದರಪೂರ್ವಕ ನಮಸ್ಕಾರಗಳು.

ಸಂಘವು ಕೈಗೆತ್ತಿಕೊಂಡಿರುವ ಕಾರ್ಯಕ್ರಮ **"ಸಾಂತ್ವನ ನಿಧಿ"** ಮತ್ತು ಆ ಸಂಬಂಧದಲ್ಲಿನ ಬೆಳವಣಿಗೆಗಳನ್ನು ನಿಮ್ಮೊಡನೆ ಹಂಚಿಕೊಳ್ಳಬಯಸುತ್ತೇನೆ.

ಜನನ, ಮರಣಗಳು ಪರಿವಾರಗಳಲ್ಲಿ ಸಹಜ. ಮೊದಲನೆಯದು ಸಂತಸದಾಯಕವಾದರೆ ಎರಡನೆಯದು ಶೋಕಪೂರಿತ ಸಮಯ. ಈ ವಿಯೋಗವನ್ನು ತಡೆಯಲು ಸಾಧ್ಯವಿಲ್ಲ. ಆದರೆ ಇಂಥಹ ಸಂದರ್ಭಗಳಲ್ಲಿ ಮೃತರ ಪರಿವಾರದವರಿಗೆ ಸ್ವಾಂತನ ನೀಡುವುದು, ಅವರಿಗೆ ಅನಾಥ ಪ್ರಜ್ಞೆ ಕಾಡದಂತೆ ನೋಡಿಕೊಳ್ಳುವುದು ಸಾಧ್ಯ ಮತ್ತು ಅವಶ್ಯ ಕೂಡ. ಈ ನಿಟ್ಟಿನಲ್ಲಿ, ಸಂಘದ ಸದಸ್ಯರ ಪರಿವಾರಗಳಲ್ಲಿ ಸಂಭವಿಸಬಹುದಾದ ಮರಣದ ಸಂದರ್ಭದಲ್ಲಿ ದುಃಖತಪ್ತ ಕುಟುಂಬದವರಿಗೆ ಲೌಕಿಕ, ನೈತಿಕ ಬೆಂಬಲ ನೀಡಿ ಅವರುಗಳು ಮಾನಸಿಕವಾಗಿ ಕುಗ್ಗದಂತೆ ನೆರವಾಗುವುದು ಸಂಘದ ಉದ್ದೇಶ. ಈ ದೃಷ್ಠಿಯಿಂದ ರೂಪಿಸಲ್ಪಟ್ಟಿರುವುದು **"ಸಾಂತ್ವನ ನಿಧಿ ಯೋಜನೆ"**. ಈ ಯೋಜನೆಗೆ, ಕಾರ್ಯಕಾರಿ ಸಮಿತಿಯ ನಿರೀಕ್ಷೆಯಂತೆಯೇ ಸದಸ್ಯರಿಂದ ಉತ್ತಮ ಪ್ರತಿಕ್ರಿಯೆ ಮತ್ತು ಪ್ರೋತ್ಸಾಹ ಲಭಿಸುತ್ತಲಿದೆ. ಹಲವಾರು ಸದಸ್ಯರು ಇದಕ್ಕಾಗಿ ಉದಾರ ದೇಣಿಗೆ ನೀಡಿರುತ್ತಾರೆ. ಕೆಲವು ಸದಸ್ಯರು ತಮ್ಮ ಪ್ರೀತಿಪಾತ್ರರ ನೆನಪಿನಲ್ಲಿ ಹೃತ್ಪೂರ್ವಕವಾಗಿ ನೆರವು ನೀಡಿದ್ದಾರೆ. ಈ ಮಹನೀಯರೆಲ್ಲರಿಗೂ ಈ ಮೂಲಕ ಮತ್ತೊಮ್ಮೆ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ಈ ಕಾರ್ಯಕ್ಕಾಗಿ ಸದಸ್ಯರು ಧನಸಹಾಯವನ್ನು ತಮಗೆ ಸೂಕ್ತವೆನಿಸಿದ ಕಂತುಗಳಲ್ಲಿ ಸಹಾ ನೀಡಬಹುದಾಗಿರುತ್ತದೆ. ಈ ಯೋಜನೆಯ ಯಶಸ್ವೀ ನಿರ್ವಹಣೆಗಾಗಿ ಕೆಲವು ಸದಸ್ಯರು ಆಸ್ಥೆ ವಹಿಸಿ ನೀಡಿರುವ ಸಲಹೆ ಸೂಚನೆಗಳು ಈ ಕಾರ್ಯಕ್ರಮದ ಮುನ್ನಡೆಗೆ ನೆರವಾಗಿವೆ.

ಈ ನಿಧಿಯ ಸುಸೂತ್ರ ನಿರ್ವಹಣೆಯ ದೃಷ್ಟಿಯಿಂದ ಕೆಲವು ಸದಸ್ಯರ ಸಲಹೆಯಂತೆ ಬೆಂಗಳೂರಿನ ಕೆನರಾಬ್ಯಾಂಕ್ ಸಾರಕ್ಕಿ ಶಾಖೆಯಲ್ಲಿ ಪ್ರತ್ಯೇಕವಾದ ಖಾತೆಯನ್ನು ತೆರೆಯಲಾಗಿದೆ.

ಈ ಹಿಂದೆ ನಿರ್ಧರಿಸಿದಂತೆ ವೈಕುಂಠ ವಾಹನ ಕೊಡುಗೆಗಾಗಿ ಸಂಘದ ಸದಸ್ಯರು ಉದಾರವಾಗಿ ನೀಡಿದ್ದ ಹಣದಲ್ಲಿ (ಬಡ್ಡಿಸೇರಿ) ಉಳಿದಿದ್ದ ಮೊತ್ತವನ್ನು ಈ ಕಾರ್ಯಕ್ರಮಕ್ಕೆ corpus ಆಗಿ ನೂತನ ಖಾತೆಗೆ ವರ್ಗಾಯಿಸಲಾಗಿದೆ.

ಹಾಲಿ ಏಪ್ರಿಲ್ ಒಂದರಿಂದ ಪ್ರಾರಂಭವಾಗಿರುವ ಈ ಯೋಜನೆಯು ಮುಂದಿನ ಒಂಬತ್ತು ತಿಂಗಳ ಕಾಲ ಕಾರ್ಯಗತವಾಗಲು ಅನೇಕ ಸದಸ್ಯರು ನೆರವು ನೀಡಿರುತ್ತಾರೆ ಮತ್ತು ನೆರವಿನ ಆಶ್ವಾಸನೆ ನೀಡಿರುತ್ತಾರೆ. ಈ ಸದಸ್ಯರೆಲ್ಲರಿಗೂ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ಮುಂದಿನ ವರ್ಷದ ಜನವರಿ ಒಂದರಿಂದ ಈ ಯೋಜನೆಯು ಬ್ಯಾಂಕ್ ಠೇವಣಿಗೆ ಬರುವ ಬಡ್ಡಿಯಿಂದಲೇ ನಡೆಯಬೇಕಾಗಿರುತ್ತದೆ. ಇದಕ್ಕಾಗಿ ಇನ್ನೂ ಕನಿಷ್ಠ 8 ಲಕ್ಷ ರೂ.ಗಳ ಅವಶ್ಯಕತೆ ಇರುತ್ತದೆ. ಈ ಮೊತ್ತವು ಇನ್ನು ಕೆಲವು ತಿಂಗಳುಗಳಲ್ಲಿ ಸದಸ್ಯರಿಂದ ಸಂಗ್ರಹವಾಗುವ ನಿರೀಕ್ಷೆ ಇದೆ.

ಬೃಹಚ್ಚರಣ ಸಮುದಾಯದ ಪರಿವಾರಗಳ ಸದಸ್ಯರೆಲ್ಲರಿಗೂ ದೀರ್ಘಕಾಲ ಆಯುರಾರೋಗ್ಯವು ಲಭಿಸಲೆಂದು ಹಾರೈಸುತ್ತೇನೆ. ಆದರೂ, ವಿಧಿವಶಾತ್ ಕುಟುಂಬದಲ್ಲಿ ವಿಯೋಗ ಸಂಭವಿಸಿದಲ್ಲಿ ಆ ಸಂಗತಿಯು ತಿಳಿದು ಬಂದಾಗ ಕಾರ್ಯಕಾರಿ ಸಮಿತಿಯ ಕೆಲವು ಸದಸ್ಯರು ಆ ಕುಟುಂಬಕ್ಕೆ ಭೇಟಿ ನೀಡಿ ಸಂತಾಪ ಸೂಚಿಸಿ ಸಂದರ್ಭಾನುಸಾರ ನೆರವಾಗುವುದರ ಜೊತೆಗೆ ಆ ಕುಟುಂಬಕ್ಕೆ ಈಗಾಗಲೇ ನಿರ್ಧರಿಸಲ್ಪಟ್ಟ ಮೊತ್ತವನ್ನು ಗೌರವಪೂರ್ವಕವಾಗಿ ಸಲ್ಲಿಸುವರು. (ಈ ಕಾರ್ಯವು ಸುಸೂತ್ರವಾಗಿ ನೆರವೇರಲು, ಸಮಿತಿಯ ಸದಸ್ಯರಿಗೆ ಆ ಕುಟುಂಬವು ವಾಸವಾಗಿರುವ ಸ್ಥಳದ ಹತ್ತಿರವಿರುವ ಇತರ ಸದಸ್ಯರ ನೆರವು ಅವಶ್ಯವಾಗಬಹುದು. ಸದಸ್ಯರು ಈ ನಿಟ್ಟಿನಲ್ಲಿ ಆ ದಿನ ಸಮಿತಿಯ ಸದಸ್ಯರಿಗೆ ಅವಶ್ಯವಾಗುವ ಸಹಕಾರ ನೀಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.)

ಈ ಯೋಜನೆಯು ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘದ ಸದಸ್ಯರು ಮತ್ತು ಅವರುಗಳ ಕುಟುಂಬವರ್ಗಕ್ಕೆ ಮಾತ್ರ ಅನ್ವಯವಾಗುತ್ತದೆ. ಈ ನಿಧಿಯ ಪ್ರತಿ ವಿತರಣೆಯ ಬಗ್ಗೆ ಕಾರ್ಯಕಾರಿ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

ಈ ಯೋಜನೆಯು ಯಶಸ್ವಿಯಾಗಿ ಕಾರ್ಯಗತವಾಗಲು ಸದಸ್ಯರೆಲ್ಲರ ನೆರವು ಹಾಗೂ ಸಕ್ರಿಯ ಸಹಕಾರ ಅತ್ಯವಶ್ಯಕವಾಗಿರುತ್ತದೆ. ಪರಿವಾರದಲ್ಲಿನ ವಿಯೋಗವು ತಿಳಿದು ಬಂದಾಕ್ಷಣ ಕಾರ್ಯಕಾರಿ ಸಮಿತಿ ಸದಸ್ಯರಲ್ಲೊಬ್ಬರಿಗೆ ತಿಳಿಸಬೇಕು. ಸಮಿತಿಯ ಸದಸ್ಯರ ಮೊಬೈಲ್ ನಂಬರ್‌ಗಳು ಸದಸ್ಯರ ಕೈಪಿಡಿ(Members' Directory), "ಬೃಹಚ್ಚರಣ" ಸಂಚಿಕೆಗಳ ಒಳಪುಟ ಮತ್ತು ಸಂಘದ ಕ್ಯಾಲೆಂಡರ್‌ನಲ್ಲಿ ಲಭ್ಯವಿರುತ್ತದೆ.

ನಿಮ್ಮೆಲ್ಲರ ಬೆಂಬಲ ಮತ್ತು ಪ್ರೋತ್ಸಾಹದಿಂದ ಈ ಯೋಜನೆಯು ಪ್ರತಿ ವರ್ಷವೂ ಸುಸೂತ್ರವಾಗಿ ನಡೆಯುತ್ತದೆಂಬ ವಿಶ್ವಾಸ ನನಗಿದೆ.

**ಮತ್ತೊಮ್ಮೆ ತಮಗೆಲ್ಲರಿಗೂ ಕೃತಜ್ಞತಾಪೂರ್ವಕ ಧನ್ಯವಾದಗಳು.**

**– ಬಿ. ಸುಬ್ರಹ್ಮಣ್ಯಂ, ಅಧ್ಯಕ್ಷರು**

# ಜಪದಕಟ್ಟೆ ಪವಿತ್ರ ಕ್ಷೇತ್ರ



ಈ ಪವಿತ್ರ ಕ್ಷೇತ್ರ, ಕಾವೇರಿ ನದಿಯ ತಟದಲ್ಲಿ ನಿಶ್ಯಬ್ದವಾದ ಪರಿಸರದಲ್ಲಿ ರಮ್ಯತೆಯಿಂದ ಮೆರೆದಿರುವ ಕ್ಷೇತ್ರ. ತನ್ನ ಎರಡು ದಂಡೆಗಳಲ್ಲಿ ಹಸಿರನ್ನೇ ಬೆಳೆಸಿಕೊಂಡು ಸೂರ್ಯಾಸ್ತಮಾನದಲ್ಲಿ ತನ್ನ ಮೈಬಣ್ಣವನ್ನೇ ಬದಲಾಯಿಸಿಕೊಳ್ಳುವಂಥ ಈ ಕ್ಷೇತ್ರದ ರಮಣೀಯತೆಗೆ ಮಾರುಹೋದ ಶಿವ ಪರಮಾತ್ಮನೇ ಧ್ಯಾನ ಮಗ್ನನಾಗಿ ಈ ಕ್ಷೇತ್ರದಲ್ಲಿ ನೆಲೆಸಿದ್ದಾನೆ. ಅನಾದಿ ಕಾಲದಲ್ಲಿ ಅನೇಕ ಋಷಿಮುನಿಗಳು ತಪಸನ್ನು ಆಚರಿಸುತ್ತಿದ್ದ ತಪೋ ಭೂಮಿಯೇ ಈ ಕ್ಷೇತ್ರ. ಪ್ರಸ್ತುತ ಲೇಖನದಲ್ಲಿ ಪರಿಚಯಿಸುತ್ತಿರುವ ಪುಣ್ಯಕ್ಷೇತ್ರವೇ ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕಿನಲ್ಲಿರುವ ಪ್ರಸಿದ್ಧ ಧಾರ್ಮಿಕ ಸ್ಥಳ ಜಪದಕಟ್ಟೆ.

ರಾಜಧಾನಿ ಬೆಂಗಳೂರಿನಿಂದ ಜಪದಕಟ್ಟೆ ಕ್ಷೇತ್ರ ಸುಮಾರು 205 ಕಿಲೋಮೀಟರ್ ದೂರದಲ್ಲಿದೆ. ಮೈಸೂರಿನಿಂದ 75 ಕಿಲೋಮೀಟರ್, ಕೆ.ಆರ್. ನಗರದಿಂದ 35 ಕಿಲೋಮೀಟರ್, ಸಾಲಿಗ್ರಾಮದಿಂದ 10 ಕಿಲೋಮೀಟರ್ ದೂರದಲ್ಲಿರುವ ಜಪದಕಟ್ಟೆಯು ದಕ್ಷಿಣ ಗಂಗೆ ಕಾವೇರಿ ನದಿ ದಂಡೆಯ ಮೇಲೆ ಸ್ಥಿತವಿದೆ.

ಜಪದಕಟ್ಟೆ ಹೆಸರೇ ಸೂಚಿಸುವಂತೆ ಮನಸ್ಸಿಗೆ ಶಾಂತಿ ಸಮಾಧಾನಗಳನ್ನು ನೀಡುವ ಸುಕ್ಷೇತ್ರವಾಗಿದೆ. ಇಲ್ಲಿ ನಮ್ಮ ರಾಜ್ಯದ ಜೀವ ನದಿ ದಕ್ಷಿಣ ಗಂಗೆ ಕಾವೇರಿ ನದಿಯು ಪೂರ್ವದಿಂದ ದಕ್ಷಿಣಾಭಿಮುಖವಾಗಿ ಹರಿಯುವುದನ್ನು ನಾವು ಕಾಣಬಹುದು. ಹೀಗೆ ನದಿಯು ತನ್ನ ದಿಕ್ಕನ್ನು ಬದಲಾಯಿಸುವ ಸ್ಥಳಗಳು ಪುಣ್ಯಕ್ಷೇತ್ರಗಳೆಂದೇ ಅನಾದಿಕಾಲದಿಂದಲೂ ನಮ್ಮ ಪೂರ್ವಜರು ಅನುಸರಿಸಿಕೊಂಡು ಬಂದಿದ್ದಾರೆ. ಆದ್ದರಿಂದ ಈ ಕ್ಷೇತ್ರಕ್ಕೆ ಪುರಾಣಗಳಲ್ಲಿ ದಕ್ಷಿಣಾ ಆವರ್ತ ಎಂದು ಕರೆಯಲಾಗುತ್ತದೆ. ಜಪದಕಟ್ಟೆ ಕ್ಷೇತ್ರದಲ್ಲಿ ಜಪೇಶ್ವರ ಎಂದು ಕರೆಯಲ್ಪಡುವ ಶಿವನು ನೆಲೆಸಿದ್ದಾನೆ.

ಸ್ಕಂದ ಪುರಾಣದಲ್ಲಿರುವ ಉಲ್ಲೇಖದ ಪ್ರಕಾರ ಜಪದಕಟ್ಟೆ ಕ್ಷೇತ್ರದಲ್ಲಿ, ತ್ರೇತಾಯುಗದಲ್ಲಿ ಜಬಲ ಮಹರ್ಷಿಗಳು ಕಾವೇರಿ ನದಿಯ ತೀರದಲ್ಲಿ ಆಶ್ರಮವನ್ನು ಕಟ್ಟಿಕೊಂಡು ಜಪ–ತಪಗಳನ್ನು ಆಚರಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಸೀತೆಯನ್ನು ಅರಸಿಕೊಂಡು ಈ ಸ್ಥಳಕ್ಕೆ ಪ್ರಭು ಶ್ರೀರಾಮಚಂದ್ರ ಹಾಗೂ ಅವರ ಸಹೋದರರಾದ ಲಕ್ಷ್ಮಣರು ಆಗಮಿಸಿರುತ್ತಾರೆ. ಅವರಿಗೆ ಜಬಲ ಮಹರ್ಷಿಗಳು ಶಿವ ಪಂಚಾಕ್ಷರಿ ಸ್ತೋತ್ರವನ್ನು ಇದೇ ಸ್ಥಳದಲ್ಲಿ ಬೋಧಿಸಿದ್ದರಂತೆ. ಪ್ರಭು ಶ್ರೀರಾಮಚಂದ್ರ ಹಾಗೂ ಲಕ್ಷ್ಮಣ ಈ ಕ್ಷೇತ್ರದಲ್ಲಿ ಕೆಲಕಾಲ ತಂಗಿದ್ದು ಧ್ಯಾನವನ್ನು ಮಾಡಿ ಇಲ್ಲೇ ಇದ್ದ ಶಿವಲಿಂಗಕ್ಕೆ ಪೂಜೆಯನ್ನು ಸಲ್ಲಿಸಿದ್ದರಂತೆ. ಶ್ರೀ ರಾಮಚಂದ್ರನು ಪೂಜೆಯನ್ನು ಸಲ್ಲಿಸಿ ಜಪಿಸಿದ ಈ ಶಿವಲಿಂಗವನ್ನು ಜಪೇಶ್ವರ ಎಂದು ಕರೆಯಲಾಗುತ್ತದೆ. ಈ ಸನ್ನಿಧಿಯ ಜೊತೆಗೆ ಗಂಗಾಧರೇಶ್ವರ, ಶಾರದಾಂಬ ದೇವಿ ಹಾಗು ಜಗದ್ಗುರು ಶ್ರೀ ಆದಿ ಶಂಕರಾಚಾರ್ಯರ ದೇವಾಲಯಗಳೂ ಇವೆ. ಅಲ್ಲದೆ ಹೋಮ ಹವನಾದಿಗಳನ್ನು ಮಾಡಲು ಯಾಗ ಶಾಲೆ, ಅನ್ನಸಂತರ್ಪಣೆಗಾಗಿಯೇ ಭೋಜನ ಶಾಲೆ ಹಾಗು ಎರಡು ಅತಿಥಿ ಗೃಹಗಳು ಇವೆ. ಈ ಕ್ಷೇತ್ರವು ಕೆಲವು ವರ್ಷಗಳ ಹಿಂದೆ ನಿರ್ಜನ ಪ್ರದೇಶದಲ್ಲಿದ್ದು ಕುಸಿಯುವ ಸ್ಥಿತಿಗೆ ತಲುಪಿತ್ತು. ಈ ಸ್ಥಳದ ಬಗ್ಗೆ ಹೆಚ್ಚಿನ ಮಂದಿಗೆ ತಿಳಿದೇ ಇರಲಿಲ್ಲ.

ನಂತರ ಯಡತೊರೆಯ ಯೋಗಾನಂದೀಶ್ವರ ಸರಸ್ವತಿ ಮಠವು ಈ ಸ್ಥಳದ ಸಂಪೂರ್ಣ ಇತಿಹಾಸವನ್ನು ವಿಶ್ಲೇಷಣೆ ಮಾಡಿ ದೇಗುಲದ ಪುನರುಜ್ಜೀವನವನ್ನು ಕೈಗೊಂಡಿತು. ಜಪೇಶ್ವರ ದೇಗುಲದ ಮುಂಭಾಗ ಹಾಗು ಅಕ್ಕಪಕ್ಕದಲ್ಲಿ ಉದ್ಯಾನವನವನ್ನು ನಿರ್ಮಿಸಲಾಗಿದ್ದು, ಇವು ಈ ಸ್ಥಳದ ಸೌಂದರ್ಯವನ್ನೇ ಹೆಚ್ಚಿಸಿವೆ. ವಿಶೇಷವೆಂದರೆ, ಕಾವೇರಿ ನದಿಯು ಜಪದಕಟ್ಟೆ ಕ್ಷೇತ್ರದಲ್ಲಿ ಅಬ್ಬರದಿಂದ ಹರಿಯುವುದಿಲ್ಲ. ನದಿಯ ಆಳವೂ ಸಹ ಹೆಚ್ಚಾಗಿಲ್ಲ. ಹರಿವಿನಲ್ಲಿ ಏರಿಳಿತಗಳು ಸಹ ಕಡಿಮೆ. ನದಿಯಲ್ಲಿರುವ ಸಣ್ಣ ಪುಟ್ಟ ಬಂಡೆಗಳನ್ನು ಏರಿ ಕುಳಿತರೆ ಸುತ್ತಲೂ ನೀರು ಹಾಗೂ ಹಸಿರುಮಯವಾದ ವಾತಾವರಣವು ನಮ್ಮನ್ನು ಬೇರೆಯದೇ ಲೋಕಕ್ಕೆ ಕೊಂಡೊಯ್ಯುತ್ತವೆ. ಜಪದಕಟ್ಟೆ ಕ್ಷೇತ್ರವು ಇತರ ಪ್ರವಾಸಿ ತಾಣಗಳಂತೆ ಜನದಟ್ಟಣೆಯಿಂದ ಕೂಡಿರುವುದಿಲ್ಲ. ಹಾಗಾಗಿ, ನಗರ ಜೀವನದಿಂದ ದಣಿದ ಜನರಿಗೆ ಈ ಕ್ಷೇತ್ರವು ಹಿತವೆನಿಸುವ ತಾಣವಾಗಿದೆ. ಇಲ್ಲಿಯ ಮಠದಲ್ಲಿ ಮುಂಚಿತವಾಗಿಯೇ ತಿಳಿಸಿದ್ದರೆ ದೂರದ ಸ್ಥಳಗಳಿಂದ ಆಗಮಿಸುವ ಧಾರ್ಮಿಕ ಯಾತ್ರಾರ್ಥಿಗಳಿಗೆ ವಸತಿ ಸೌಲಭ್ಯ ಹಾಗೂ ಭೋಜನ ವ್ಯವಸ್ಥೆಯನ್ನು ಒದಗಿಸಲಾಗುತ್ತದೆ. ದೈವಿಕ ವಾತಾವರಣದೊಂದಿಗೆ ಪ್ರಕೃತಿಯ ಸೌಂದರ್ಯವನ್ನು ಸವಿಯ ಬಯಸುವವರಿಗೆ ಜಪದಕಟ್ಟೆ ಕ್ಷೇತ್ರ ಸೂಕ್ತವಾದ ಸ್ಥಳವಾಗಿದೆ.

ಮೈಸೂರಿನಲ್ಲಿರುವ ನೂತನ ತಾಲೂಕು ಸಾಲಿಗ್ರಾಮದಲ್ಲಿ ನೆಲೆಸಿರುವ ಇಂತಹ ಪುರಾಣ ಪ್ರಸಿದ್ಧ ಶಿವ ದೇವಾಲಯದ ಪರಿಚಯ ಮಾಡಿಕೊಂಡ ತಮಗೆಲ್ಲರಿಗೂ ಆ ಭಗವಂತನ ಕೃಪಾಕಟಾಕ್ಷ ಸದಾ ಕಾಲ ಇರಲೆಂದು ಆಶಿಸುತ್ತೇನೆ.



**ಹೆಚ್.ಕೆ. ಶಶಿಧರ್**
**9845173766**

# ವಿಶ್ವಾಸ



'ಉಂಡ ಮನೆಯಗಳ ಎಣಿಸೋನು,' 'ಅನ್ನವಿಟ್ಟ ಮನೆಗೆ ಕನ್ನ ಹಾಕಿದ,' ನಂಬಿಸಿ ಕುತ್ತಿಗೆ ಕೊಯ್ದ,' – ಇಂತಹ ಮಾತುಗಳು ಇಂದಿನ ವಾತಾವರಣದಲ್ಲಿ ಮತ್ತೆ ಮತ್ತೆ ಕೇಳಿಬರುತ್ತಿವೆ. ಇವು ವಿಶ್ವಾಸ ದ್ರೋಹದ ನಿದರ್ಶನಗಳು. ವಿಶ್ವಾಸಕರೆಂದು ನಂಬಿ ಆತ್ಮೀಯತೆ ಬೆಳೆಸಿಕೊಂಡವರಿಂದಲೇ ಬಲವಾದ ಏಟು ಬಿದ್ದಾಗ ನಮಗಾಗುವ ಮಾನಸಿಕ ತೊಳಲಾಟ ವರ್ಣಿಸಲಸದಳ. ಆಗ ಯಾರು ವಿಶ್ವಾಸಿಗಳು? ಯಾರಲ್ಲಿ ವಿಶ್ವಾಸವಿಡಬೇಕು? ಎನ್ನುವ ಪ್ರಶ್ನೆಗಳು ಎದುರಾಗುತ್ತವೆ. ಕೊನೆಗೆ ಯಾರಲ್ಲೂ ವಿಶ್ವಾಸ ಬೆಳೆಸುವ ಗೊಡವೆಯೇ ಬೇಡ, ನಮ್ಮಿಷ್ಟಕ್ಕೆ ನಾವಿರೋಣ ಎನ್ನುವ ನಿಲುವಿಗೆ ಬರಬೇಕು ಎನ್ನಿಸುತ್ತದೆ. ಆದರೆ ಮಾನವ ಸಂಘ ಜೀವಿ. ಸಮಾಜದಿಂದ ಹೊರಗುಳಿದು ಏಕಾಂಗಿಯಾಗಿ ಬದುಕುವುದು ಕಷ್ಟಸಾಧ್ಯ. 'ಮೂಗಿದ್ದರೆ ತಾನೇ ನೆಗಡಿ ಎಂದು ಆ ಮೂಗನ್ನೇ ಕೊಯ್ಯಲು ಯಾವ ದಡ್ಡನೂ ಮುಂದಾಗುವುದಿಲ್ಲ.' ಅಂತೆಯೇ ಒಮ್ಮೆ ಒಬ್ಬರಿಂದ ವಿಶ್ವಾಸಘಾತವಾಯಿತೆಂದು ಎಲ್ಲಾ ಜನರನ್ನೂ ಸಂಶಯದಿಂದ ನೋಡುವುದು ಸರಿಯಾದ ತೀರ್ಮಾನವಲ್ಲ. ವಿಶ್ವಾಸ–ಅವಿಶ್ವಾಸಗಳ ಅನುಭವದಿಂದಲೇ ಹೋರಾಟಕ್ಕೆ ಸ್ಪೂರ್ತಿ, ಬದುಕು ಅರ್ಥಪೂರ್ಣವಾಗುವುದು.

ವಿಶ್ವಾಸ ಒಂದು ಆದರ್ಶ ಮೌಲ್ಯ. ಆದರೆ ಯಾರಲ್ಲಿ, ಯಾವಾಗ, ಹೇಗೆ ವಿಶ್ವಾಸ ಬೆಳೆಸಬೇಕೆನ್ನುವ ಎಚ್ಚರ ಸದಾ ಇರಬೇಕು. ಮಾನವ ಮೊದಲಿಗೆ ವಿಶ್ವಾಸವಿರಿಸಿಕೊಳ್ಳಬೇಕಾಗಿರುವುದು ಅಂತರಾತ್ಮನಲ್ಲಿ. ಮುಂದಿನದು ವಿಶ್ವಾಂತರ್ಗತ ವಿಶ್ವಾತ್ಮನಲ್ಲಿ. ಸತ್ಯ, ನೀತಿ, ಧರ್ಮ, ಮಾನವೀಯತೆ, ಪ್ರೀತಿ, ತ್ಯಾಗ, ಸೇವೆ ಇಂತಹ ಸದ್ಗುಣಗಳಲ್ಲೂ ವಿಶ್ವಾಸ ತಳೆಯಬೇಕು. ಹಾಗೆಯೇ ಗುರುಹಿರಿಯರಲ್ಲಿ, ನೆರೆ ಹೊರೆಯವರಲ್ಲಿ ವಿಶ್ವಾಸ ಬೆಳೆಸಬೇಕೆಂಬುದು ಬಹು ಮುಖ್ಯ. ಇವುಗಳ ಜೊತೆಗೆ ನಾಡು–ನುಡಿಗಳಲ್ಲಿ ವಿಶ್ವಾಸವಿಟ್ಟುಕೊಳ್ಳಬೇಕಾದುದು ಅತ್ಯವಶ್ಯಕ. ಹೀಗೆ ಸಂದರ್ಭಾನುಸಾರ ವಿಶ್ವಾಸದ ಪರಿಧಿ ವಿಸ್ತಾರವಾಗುತ್ತಾ ವಿಶ್ವವ್ಯಾಪಿಯಾಗಬೇಕು. ಆಗ ಮಾನವ–ಮಾನವರಲ್ಲಿ ಮಧುರ ಭಾಂದವ್ಯ ಏರ್ಪಡುತ್ತದೆ. "ತಾನು ಕಳ್ಳ; ಪರರನ್ನು ನಂಬ" ಎನ್ನುವಂತೆ ನಮ್ಮಲ್ಲೇ ನಮಗೆ ವಿಶ್ವಾಸವಿಲ್ಲದಾಗ ಬೇರೆಯವರಲ್ಲಿ ವಿಶ್ವಾಸ ಬೆಳೆಸಲು ಸಾಧ್ಯವಾಗದು. ಈ ಹಿನ್ನಲೆಯಲ್ಲಿ ವಿಶ್ವಾಸ ಮೊದಲಿಗೆ ವ್ಯಕ್ತಿಗತ ಆದರ್ಶವಾಗಬೇಕು. ಮುಂದೆ ಅದೇ ಸಾರ್ವತ್ರಿಕ ಮೌಲ್ಯವಾಗಿ ಎಲ್ಲರ ಒಳತಿಗೆ ಸಹಕಾರಿಯಾಗುತ್ತದೆ.

ದ್ರೌಪದಿ ಶ್ರೀ ಕೃಷ್ಣನಲ್ಲಿಟ್ಟ ವಿಶ್ವಾಸವೇ ಅವಳ ಮಾನ ಕಾಪಾಡಲು ನೆರವಾಯಿತು. ವಿಶ್ವಕಪ್ ಕ್ರಿಕೆಟ್‌ನಲ್ಲಿ ಪಾಕಿಸ್ತಾನ ವಿಶ್ವ ವಿಜೇತರಾಗಲು ಕಾರಣವಾದುದು ಅವರ ಅದಮ್ಯ ಆತ್ಮವಿಶ್ವಾಸ. ಆ ವಿಶ್ವಾಸವೇ ಆಟಗಾರರಲ್ಲಿ ಹೋರಾಟದ ಛಲ ಮೂಡಿಸಿತು. ವಿಶ್ವಕಪ್ ಕಿರೀಟಧಾರಿಗಳನ್ನಾಗಿಸಿತು. ಆರಂಭದಲ್ಲಿ ಪಾಕಿಸ್ತಾನವನ್ನು ಸುಲಭವಾಗಿ ಸೋಲಿಸಿದ್ದ ಭಾರತದ ಆಟಗಾರರು ತಮ್ಮ ಆತ್ಮವಿಶ್ವಾಸದ ಕೊರತೆಯಿಂದಾಗಿ ಹೀನಾಯಕರ ಸೋಲನ್ನು ಅನುಭವಿಸಬೇಕಾಯಿತು. ವಿಶ್ವಾಸವೇ ಬಿದ್ದು ಹೋದರೆ ಯಾರು ಎಷ್ಟು ಸಮರ್ಥರಾದರೂ ವಿಜಯಿಗಳಾಗಲು ಸಾಧ್ಯವಾಗದು. 'ಆತ್ಮವಿಶ್ವಾಸ ಯಾವಾಗಲೂ ಶಿಖರಕ್ಕೆ ಏರಿಸುವುದಿಲ್ಲ ಆದರೆ ಅದಿಲ್ಲದಿರುವಾಗಲೂ ಶಿಖರಕ್ಕೆ ಏರಿಸುವುದಿಲ್ಲ.' ಇದು ಸ್ವಿಸ್ ಗಾದೆ. 'ವಿಶ್ವಾಸವೇ ಶಕ್ತಿ ಮಹತ್ವಗಳನ್ನು ಸೇರುವಂತಿದೆ.' ತೇನ್ಸಿಂಗ್ ಎವರೆಸ್ಟ್ ಶಿಖರವನ್ನೇರಲು ಸಾಧ್ಯವಾದುದು ಆತನ ಆತ್ಮವಿಶ್ವಾಸ. ವಿಶ್ವಾಸ ವಿಜಯಕ್ಕೆ ಪ್ರೇರಕ. ಮಹತ್ ಸಾಧನೆಗೆ ಸಹಕಾರಿ.

ನಮ್ಮಲ್ಲಿ ಅಪಾರ ಶಕ್ತಿ, ಯುಕ್ತಿ, ಸಂಘಟನಾ ಸಾಮರ್ಥ್ಯವಿದ್ದರೂ ಮಾನಸಿಕ ಬಲ ಸಂಕಲ್ಪ ವಿಶ್ವಾಸದ ಕೊರತೆ ಇದ್ದಲ್ಲಿ ಯಾವ ಕ್ಷೇತ್ರದಲ್ಲೂ ಸಫಲರಾಗಲು ಸಾಧ್ಯವಾಗುವುದಿಲ್ಲ. ಆ ಕಾರಣವೇ ಹಿರಿಯರು 'ವಿಶ್ವಾಸವಿದ್ದರೆ ಹುಲ್ಲುಕಡ್ಡಿಯೂ ಹೊಳೆ ದಾಟಿಸಬಲ್ಲದು ಎಂದಿರಬೇಕು.' ಹೊಳೆ ದಾಟಿಸುವ ಶಕ್ತಿ ಇರುವುದು ತೆಪ್ಪಕ್ಕೆ ಹೊರತು ಹುಲ್ಲು ಕಡ್ಡಿಗಲ್ಲ. ನಿಜ, ಆದರೆ ಆ ಹುಲ್ಲುಕಡ್ಡಿಯ ಬಗ್ಗೆ ಅದಮ್ಯ ಆತ್ಮವಿಶ್ವಾಸ ನಮ್ಮ ದೇಹಕ್ಕೆ ಎಲ್ಲಿಲ್ಲದ ಚೈತನ್ಯ ಬರುತ್ತದೆ.

ತೋಳ್ಬಲ ವೃದ್ಧಿಯಾಗಿ ನಿರಾಯಾಸವಾಗಿ ಹೊಳೆ ದಾಟುತ್ತೇವೆ. ಹೀಗೆ, ಮಾನವ ತನ್ನಲ್ಲಿ ತಾನು ವಿಶ್ವಾಸವಿರಿಸಿಕೊಂಡು ತನ್ನ ಪರಿವಾರದಲ್ಲಿ ಬದುಕುವವರನ್ನು ವಿಶ್ವಾಸಕ್ಕೆ ತೆಗೆದುಕೊಂಡಲ್ಲಿ ವ್ಯಷ್ಟಿ ಮತ್ತು ಸಮಷ್ಟಿಯ ಬದುಕು ಸಂತೋಷದ ಆಗರವಾಗುತ್ತೆ. ಪ್ರಗತಿ ಅಂಗೈನಲ್ಲಿ ಇರುತ್ತದೆ. ಕಲ್ಯಾಣ ರಾಜ್ಯ ನೆಲೆಗೊಳ್ಳುತ್ತದೆ.



**ಎಸ್. ಶ್ರೀನಿವಾಸಯ್ಯ**
**7899318098**

## ಜನನ



ಸಂಘದ ಪೋಷಕ ಹಾಗೂ ಲೆಕ್ಕ ಪರಿಶೋಧಕರಾದ ಶ್ರೀ ಬಿ.ಎನ್. ಗೋವಿಂದ ಪ್ರಸಾದ್ ಮತ್ತು ಶ್ರೀಮತಿ ಇಂದಿರಾ ಪ್ರಸಾದ್‌ರವರ ಪುತ್ರ ಸದಸ್ಯ ಶ್ರೀ ಬಿ.ಜಿ. ಶ್ರೀರಾಮ್ ಮತ್ತು ಶ್ರೀಮತಿ ಶ್ರೇಯಾ ದಂಪತಿಗಳಿಗೆ ದಿನಾಂಕ 18.2.2023ರಂದು ಕೆನಡಾದಲ್ಲಿ ಗಂಡು ಮಗುವಿನ ಜನನವಾಯಿತು.

**ಸಂಘವು ನವಜಾತ ಶಿಶುವಿಗೆ ಆಯುರಾರೋಗ್ಯ ಹಾಗೂ ವಿದ್ಯೆಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತದೆ.**

*****************************************************************************************

## ಉಪನಯನ



ಸಂಘದ ಸದಸ್ಯ ಹಾಗೂ ಛಾಯಾಗ್ರಹಕರಾದ ಶ್ರೀ ಎನ್. ಶಿವಕುಮಾರ್ ಮತ್ತು ಶ್ರೀಮತಿ ಮಮತಾ ಶಿವಕುಮಾರ್‌ರವರ ಪುತ್ರ ಚಿ. ಸಮಾಹಿತ ಶಿವಕುಮಾರ್‌ನ ಉಪನಯನವು ತಾರೀಖು 09.04.2023ರಂದು ಬೆಂಗಳೂರಿನಲ್ಲಿ ನಡೆಯಿತು.

**ವಟುವಿಗೆ ಶುಭವಾಗಲೆಂದು ಸಂಘವು ಭಗವಂತನಲ್ಲಿ ಪ್ರಾರ್ಥಿಸುತ್ತದೆ.**

*****************************************************************************************

## ಮಾರುತಿಯ ಸಾಹಸ



ಶ್ರೀರಾಮಚಂದ್ರನು ಪಟ್ಟಾಭಿಷಕ್ತನಾದ ಮೇಲೆ ತನಗೆ ಯುದ್ಧದಲ್ಲಿ ಸಹಾಯವನ್ನು ಮಾಡಿದಂತಹವರಿಗೆಲ್ಲಾ ಔತಣ ಕೂಟವನ್ನು ಏರ್ಪಡಿಸಿದ್ದನು. ಅಲ್ಲಿ ವಾನರರೆಲ್ಲಾ ಸಾಲಾಗಿ ಕುಳಿತುಕೊಂಡರು. ಕಡೆಯಲ್ಲಿ ಮಾರುತಿಯು ಕುಳಿತಿದ್ದನು. ಬಾಣಸಿಗರು ಬಡಿಸಲು ಪ್ರಾರಂಭಿಸಿದರು. ಮೊದಲು ಅನ್ನ ಹಾಕಿ ಬೆಂಡೆಕಾಯಿಯ ಹುಳಿಯನ್ನು ಹಾಕಿದರು. ಒಬ್ಬ ಸಣ್ಣ ವಾನರನು ಬೆಂಡೆಕಾಯಿಯನ್ನು ಹಿಸುಕಲು, ಅದರಿಂದ ಸಣ್ಣ ಬೀಜವೊಂದು ಎಗರಿತು. ಅದನ್ನು ನೋಡಿ ಪಕ್ಕದ ವಾನರನಿಗೆ ಸಿಟ್ಟು ಬಂದು, ಅವನು ಕೂಡ ಬೆಂಡೆಕಾಯಿಯನ್ನು ಹಿಸುಕಿದಾಗ ಈ ಬೀಜವು ಮೇಲೆ ಹಾರಿತು. ಇದನ್ನು ನೋಡಿದ ಇನ್ನಿತರ ವಾನರರು ತಮ್ಮ ತಮ್ಮ ಶಕ್ತಿ ಸಾಮರ್ಥ್ಯವನ್ನು ತೋರಿಸಲು ಪ್ರಯತ್ನಿಸಿದರು. ಕಡೆಯಲ್ಲಿ ಕುಳಿತ ಮಾರುತಿಯು ಇದು ಒಂದು ಶ್ರೀರಾಮ ಆಜ್ಞೆ ಇರಬೇಕೆಂದು, ಸುಮ್ಮನೆ ಕುಪ್ಪಳಿಸಿ ಕುಳಿತುಕೊಂಡನು. ಶ್ರೀರಾಮನು ಇದನ್ನು ನೋಡಿ ಮಾರುತಿಯ ಪರಾಕ್ರಮವನ್ನು ಸಭಿಕರಿಗೆ ತೋರಿಸಲು ಮಾರುತಿಯನ್ನು ಕರೆದು, ಒಂದು ಕಮಲದ ಪುಷ್ಪವನ್ನು ಕೊಟ್ಟು, ಇದನ್ನು ತೆಗೆದುಕೊಂಡು ಹೋಗಿ ಸೂರ್ಯನಿಗೆ ಕೊಟ್ಟು ಬಾ ಎಂದನು. ಆಗ ಮಾರುತಿ ತನ್ನ ದೇಹವನ್ನು ಉಬ್ಬಿಸಿ ಹಾರಿದನು. ಕಮಲ ಪುಷ್ಪವನ್ನು ಸೂರ್ಯ ಭಗವಾನನಿಗೆ ಕೊಟ್ಟು, ಅಲ್ಲಿಂದ ಬಂದು ಶ್ರೀರಾಮನಿಗೆ ನಮಿಸಿ ಊಟಕ್ಕೆ ಕುಳಿತನು. ಅವನ ಸಾಹಸವನ್ನು ಕಂಡು ಪ್ರಜೆಗಳು ಮತ್ತು ರಾಣಿವಾಸದವರು ತಮ್ಮ ಮೆಚ್ಚುಗೆಯನ್ನು ಸೂಚಿಸಿದರು.



**ಎ.ವಿ. ಶ್ರೀನಿವಾಸನ್**
**7259269434**

*****************************************************************************************

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಗಾಗಿ ನುಡಿಗಳು

- ಸದೃಢ ಮಹಿಳೆಯರಿಗೆ 'ಧೋರಣೆ' ಇಲ್ಲ. ನಮಗೆ ಮಾನ ದಂಡಗಳಿವೆ.
- ಮಹಿಳೆ ಎಂದರೆ ಇನ್ನೊಬ್ಬರ ಹಾದಿಯಲ್ಲಿ ಸಾಗುವ ಬದಲು ತನ್ನದೇ ಆದ ಹೆಜ್ಜೆಯಲ್ಲಿ ನಡೆಯುವವಳು.
- ಸಮಾಜದ ಒಂದು ಶಕ್ತಿಶಾಲಿ ಜೀವಿ ಎಂದರೆ ಶಿಕ್ಷಣ ಪಡೆದ ಮಹಿಳೆ ಮತ್ತು ಸಮಾಜದಲ್ಲಿ ಜಾಗೃತಿ ಮೂಡಿಸುವ ಶಕ್ತಿಯನ್ನು ಆಕೆ ಹೊಂದಿದ್ದಾಳೆ.
- ಮಹಿಳೆ ತನ್ನನ್ನು ರಕ್ಷಿಸಿಕೊಳ್ಳುವ ನಂಬಿಕೆಯನ್ನು ಕಲಿತರೆ ಅವಳು ಜಗತ್ತನ್ನೇ ರಕ್ಷಿಸುವ ಶಕ್ತಿಯನ್ನು ಗಳಿಸುತ್ತಾಳೆ.



**ಬಿ.ಪಿ. ಸರಸ್ವತಿ**
**7760634277**

# ಎಂ.ಎಸ್. ಪ್ರಭಾಕರ್ – ವಿಭಿನ್ನ ಪ್ರಾಕಾರದ ವ್ಯಕ್ತಿತ್ವ



ಕಾಮರೂಪಿ ಎನ್ನುವ ಹೆಸರಿನಿಂದ ಪ್ರಸಿದ್ಧರಾಗಿದ್ದ ಮೊಟ್ಟನಹಳ್ಳಿ ಸೂರಪ್ಪ ಪ್ರಭಾಕರ ಅವರು 1936ರ ಮೇ ತಿಂಗಳಲ್ಲಿ ಜನಿಸಿ 86 ವರ್ಷಗಳ ಸಾರ್ಥಕ ಬಾಳ್ವೆ ನಡೆಸಿ 29 ಡಿಸೆಂಬರ್ 2022 ರಂದು ವಯೋಸಹಜ ಸಾವಿಗೆ ಒಳಗಾದರು. 1969ರಲ್ಲಿ ಧಾರವಾಡದ ಮನೋಹರ ಗ್ರಂಥಮಾಲೆಯಿಂದ ಪ್ರಕಟವಾದ 'ಒಂದು ತೊಲ ಪುನುಗು ಮತ್ತು ಇತರ ಕತೆಗಳು' ಪುಸ್ತಕದಿಂದ ಆಧುನಿಕ ಕನ್ನಡ ಸಾಹಿತ್ಯ ಲೋಕದಲ್ಲಿ ಅವರ ಚಿರಪರಿಚಿತರಾದರು. ಅವರು ತಮ್ಮ ಜೀವಿತದ ಬಹುಕಾಲ ಅಸ್ಸಾಂನಲ್ಲಿ ಕಳೆದರು. ಅಸ್ಸಾಂಗೆ ಕಾಮರೂಪ ಎನ್ನುವ ಹೆಸರಿದೆ. ಆದ್ದರಿಂದ ಇವರು ತಮ್ಮನ್ನು ಕಾಮರೂಪಿ ಎಂದು ಗುರುತಿಸಿಕೊಂಡರು. ಕಾಮರೂಪಿ ಎಂದರೆ ಇಷ್ಟ ಬಂದ ರೂಪ ಪಡೆದುಕೊಳ್ಳುವುದು.

ಆ ದಿನಗಳಲ್ಲಿ ಯುವಲೇಖಕರಾದ ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಚಂದ್ರಶೇಖರ ಕಂಬಾರ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಶಂಕರ ಮೊಕಾಶಿ ಮುಂತಾದವರು, ಗೋಪಾಲಕೃಷ್ಣ ಅಡಿಗರ ನೇತೃತ್ವದಲ್ಲಿ ಕನ್ನಡದಲ್ಲಿ ನವ್ಯ ಸಾಹಿತ್ಯ ಪಂಥವನ್ನು ಶ್ರೀಮಂತಗೊಳಿಸುತ್ತಿದ್ದಾಗ, ಇವರಿಗಿಂತ ಬೇರೆಯಾದ ಎರಡು ವಿಭಿನ್ನ ವೋಲಟೈಲ್ ಹಾಗೂ ವೈಬ್ರೆಂಟ್ ಧ್ವನಿಗಳು ಎಲ್ಲರ ಗಮನ ಸೆಳೆದವು. ಆ ಇಬ್ಬರೇ ಅಮೇರಿಕಾ ಕನ್ನಡಿಗ ಎ.ಕೆ. ರಾಮಾನುಜಂ, ಕಾಮರೂಪದಲ್ಲಿದ್ದ ಎಂ.ಎಸ್.ಪ್ರಭಾಕರ. ರಾಮಾನುಜಂ ದಂಡಿಯಾಗಿ ಬರೆದರೆ ಪ್ರಭಾಕರ ಯಾವಾಗಲೋ ಕೊಂಚ ಕೊಂಚ ಬರೆದರು. 1969 ರಿಂದ 1981ರವರೆಗೆ ಅವರು ಬರೆದದ್ದು ಒಟ್ಟು 265 ಪುಟಗಳು ಮಾತ್ರ. ಇದು ಅವರ ಸಂಯಮದ ಸೂಚನೆ.

"ಒಂದು ತೊಲ ಪುನುಗು ಮತ್ತು ಇತರ ಕತೆಗಳು" (1969), "ಕುದುರೆ ಮೊಟ್ಟೆ" (1974) ಕಾದಂಬರಿ, "ಅಂಜಿಕಿನ್ಯಾತಕಯ್ಯ" ನಾಟಕ (1981), ಇವು ಅವರ ಕೆಲವು ಕನ್ನಡ ಕೃತಿಗಳು. 27 ವರ್ಷಗಳ ನಂತರ Words and Ideas ಹಾಗೂ Looking Back into the Future ಎನ್ನುವ ಎರಡು ಕೃತಿಗಳು ಪ್ರಕಟಗೊಂಡವು.

1953 ರಿಂದ 1957 ರ ಅವಧಿಯಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ.ಎ.ಆನರ್ಸ್ ಹಾಗೂ ಎಂ.ಎ. ಇಂಗ್ಲೀಷ್ ಪದವೀಧರರಾದ MSP, 1957–62 ರವರೆಗೆ ಬಸವನಗುಡಿ ನ್ಯಾಷನಲ್ ಕಾಲೇಜು ಹಾಗೂ ಧಾರವಾಡದ ಕರ್ನಾಟಕ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಂತರ ಅಸ್ಸಾಂನ ಗೌಹಾತಿ ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಅಧ್ಯಾಪಕರಾಗಿದ್ದು ನಂತರ ಪತ್ರಕರ್ತರಾಗಿ ಹಲವು ವರ್ಷಗಳ ಕಾಲ ಕೀರ್ತಿಶಿಖರಕ್ಕೇರಿದರು. 1975 ರಿಂದ 1983 ರವರೆಗೆ ಮುಂಬಯಿಯ Economic and Political Weekly ಪತ್ರಿಕೆಯ ಸಂಪಾದಕರಾಗಿದ್ದರು, ಆಗ "ಕುದುರೆ ಮೊಟ್ಟೆ" ಕೃತಿಗೆ 1976ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆಯಿತು.

The Hindu ಹಾಗೂ Frontline ಪತ್ರಿಕೆಗಳ ವಿಶೇಷ ಕರೆಸ್ಪಾಂಡೆಂಟ್ ಆಗಿ 1983 ರಿಂದ 1994 ರವರೆಗೆ ಗೌಹಾತಿಯಲ್ಲಿಯೂ ಮತ್ತು 1994 ರಿಂದ 2002 ರವರೆಗೆ ದಕ್ಷಿಣ ಆಫ್ರಿಕಾದ ಜೊಹಾನ್ಸ್ ಬರ್ಗ್ ಹಾಗೂ ಕೇಪ್ ಟೌನ್ ಗಳಲ್ಲಿ ಕಾರ್ಯ ನಿರ್ವಹಿಸಿದ್ದರು. 2002 ರಲ್ಲಿ ನಿವೃತ್ತಿ ಪಡೆದ ಪ್ರಭಾಕರ ಅವರು 2006ರವರೆಗೆ ಗೌಹಾತಿಯಲ್ಲಿ ನೆಲೆಸಿದ್ದು 2010ರಿಂದ ತಮ್ಮ ತವರು ಪಟ್ಟಣ ಕೋಲಾರದಲ್ಲಿ ವಾಸ್ತವ್ಯ ಹೂಡಿದರು.

ಎಡಪಂಥೀಯ ವಿಚಾರಧಾರೆಗಳತ್ತ ಆಳವಾದ ಒಲವಿದ್ದ ಕಾಮರೂಪಿ ಅವರು ಸಂಗೀತ, ಚೆಸ್ ಆಟಗಳನ್ನು ಇಷ್ಟಪಡುತ್ತಿದ್ದರು. ವಿವಿಧ ವಿಷಯಗಳ ವಿವಿಧ ಪ್ರಕಾರಗಳ ಅಪಾರ ಸಂಖ್ಯೆಯ ಓದುವಿಕೆ ಅವರದಾಗಿತ್ತು. ಸದ್ದುಗದ್ದಲಗಳಿಲ್ಲದೆ ಅರ್ಥಪೂರ್ಣ ಬದುಕು ನಡೆಸಿ "ತಮಗೆ ಇಷ್ಟ ಬಂದ ರೂಪ" ಪಡೆದು ಗಟ್ಟಿಯಾದ ಕಡಿಮೆ ಸಂಖ್ಯೆಯ ಅಡಿಗೋತ್ತರ ಯುವಪೀಳಿಗೆಯ ಮೇಲೆ ಕಿಂಚಿತ್ತಾದರೂ ಪ್ರಭಾವ ಬೀರಿದ MSP ಅವರು ಬದುಕಿದ್ದಾಗಿನಂತೆಯೇ ಚಿರಮೌನ ತಲುಪಿ ಗಂಭೀರ ಬರಹಗಾರರನ್ನು ಮೌನಕ್ಕೆ ತಳ್ಳಿದ್ದಾರೆ.



**ಕೆ.ಎಸ್.ಮಧುಸೂದನ**
**9902145359**

# ನಾಗಾರಾಧನೆ – 24.02.2023














# ನಾಗಾರಾಧನೆ - 24.02.2023








# ನಾಗಾರಾಧನೆ - 24.02.2023








# ನಾಗಾರಾಧನೆ – 24.02.2023














# ನಾಗಾರಾಧನೆ – 24.02.2023








# ನಾಗಾರಾಧನೆ - 24.02.2023









ನಾಗಾರಾಧನೆಯಂದು ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಲು ಶ್ರಮಿಸಿದ ಸಂಘದ ಸದಸ್ಯರ ಸಹಕಾರವನ್ನು ಸ್ಮರಿಸಿದ ಸಂದರ್ಭ



# ಸಾಂತ್ವನ ನಿಧಿಗೆ ದೇಣಿಗೆ ನೀಡಿದ ಸದಸ್ಯರು ಮತ್ತು ಸಮುದಾಯದವರು (ರೂ. ಗಳಲ್ಲಿ)

| | | | | | |
|---|---|---|---|---|---|
|  | ಶೇಖರ್ ಕೆ.ಸಿ. | 26500/– |  | ಎಸ್. ರಾಧಾಕೃಷ್ಣನ್ | 5001/– |
|  | ಸೂರ್ಯನಾರಾಯಣ ಜಿ.ಎಸ್. | 10000/– |  | ನಟರಾಜ ಬಿ.ಸಿ. | 5000/– |
|  | ನಾಗರಾಜ್ ಎನ್. | 5000/– |  | ಅರುಣ್ ಕುಮಾರ್ ಆರ್.ಪಿ. ಮತ್ತು ಕುಟುಂಬ | 5000/– |
|  | ಯಮಲೂರು ಶ್ರೀನಿವಾಸಯ್ಯ & ಕಮಲಮ್ಮ ಕುಟುಂಬ | 150000/– |  | ಬಾಲಸುಬ್ರಹ್ಮಣ್ಯಂ ಎಸ್.ಆರ್. | 5000/– |
|  | ರಮೇಶ್ ಆರ್.ಎಸ್. | 10000/– |  | ವಿಜಯಕುಮಾರ್ ಎಸ್.ಆರ್. | 5001/– |
|  | ಚಕ್ರಪಾಣಿ | 5000/– |  | ರಮಾ ದೇವಿ ಕೆ.ಆರ್. | 5000/– |
|  | ನಾಗರತ್ನ ಸತ್ಯನಾರಾಯಣ | 1500/– |  | ಸುಬ್ರಹ್ಮಣ್ಯ ಎಸ್.ಜಿ. | 1000/– |
|  | ಗಿರಿಜಾದೇವಿ ಎಂ. | 2000/– |  | ಕೃಷ್ಣ ಎಸ್. | 1000/– |
|  | ಆರ್ ಎನ್ ಪದ್ಮಾವತಮ್ಮ ಮತ್ತು ಕುಟುಂಬ | 5001/– |  | ವಿಶ್ವನಾಥ್ ಎನ್. | 2500/– |
|  | ಸುಬ್ರಹ್ಮಣ್ಯಂ ಎಸ್.ಎಲ್. | 1501/– |  | ಈಶ್ವರನ್ ಎ. | 5001/– |
|  | ಅಟ್ಟೂರು ರಾಮಕೃಷ್ಣ ಶರ್ಮ | 5000/– |  | ರವಿಶಂಕರ್ ಆರ್.ಪಿ. | 5000/– |
|  | ಅನುರಾಧಾ ತ್ಯಾಗರಾಜನ್ | 1001/– |  | ತಾರಾ ರವೀಂದ್ರ | 2500/– |
|  | ಲತಾ ಎಸ್.ಆರ್. | 2500/– |  | ಮಣಿ ವಿ.ಎಸ್. | 25000/– |
|  | ರೂಪಾ ವಿಶ್ವೇಶ್ | 2500/– |  | ಗೋವಿಂದ್ ಬಿ.ಇ. | 5000/– |

# ಸಾಂತ್ವನ ನಿಧಿಗೆ ದೇಣಿಗೆ ನೀಡಿದ ಸದಸ್ಯರು ಮತ್ತು ಸಮುದಾಯದವರು (ರೂ. ಗಳಲ್ಲಿ)

| | | | | | |
|---|---|---|---|---|---|
|  | ರಮಾ ಸುಬ್ಬ ರಾವ್ | 2500/– |  | ಸೀತಾಲಕ್ಷ್ಮಿ ಬಿ.ಇ. | 5000/– |
|  | ರವಿಶಂಕರ್ ಜಿ.ಎಸ್. | 2000/– |  | ರಾಜಲಕ್ಷ್ಮೀ ರಾಮಚಂದ್ರನ್ | 10000/– |
|  | ಕುಮಾರ್ ಆರ್.ಎನ್. | 5000/– |  | ಬಿ.ವಿ. ಶೇಷಾದ್ರಿ | 10000/– |
|  | ಗೋವಿಂದರಾಜು ಡಿ.ಎಸ್. | 5000/– |  | ನಿರ್ಮಲಾ ಸುಧೀಂದ್ರ | 5000/– |
|  | ಕುಮಾರ್ ಬಿ.ಸಿ. | 500/– |  | ಎಸ್. ಎ. ನಾರಾಯಣ್ ಮತ್ತು ಸರಸ್ವತಿ ನಾರಾಯಣ್ ಸ್ಮರಣಾರ್ಥ | 25000/– |
|  | ರವಿ ಸರ್ಜಾಪುರ್ | 1000/– |  | ದಿ॥ ದಾನಪ್ಪ ಮತ್ತು ಅಮ್ಮಯ್ಯಮ್ಮ ಕುಟುಂಬದವರು | 15000/– |
|  | ಕೃಷ್ಣ ಮೂರ್ತಿ ಎ.ವಿ. ಮತ್ತು ಗೌರಮ್ಮ ಜಿ.ಎಸ್. ಸ್ಮರಣಾರ್ಥ | 60000/– |  | ಟಿ.ಪಿ. ಸೂರ್ಯನಾರಾಯಣ | 5000/– |
|  | ಶಶಿಕಲಾ ಪಿ. | 5000/– |  | ವೆಂಕಟಲಕ್ಷ್ಮಮ್ಮ ಮತ್ತು ನಡವತ್ತಿ ವೆಂಕಟರಾಮಯ್ಯ ಸ್ಮರಣಾರ್ಥ | 10000/– |
|  | ಇಂದಿರಮ್ಮ ಕೃಷ್ಣಮೂರ್ತಿ ಬಿ.ಎಸ್. | 5000/– |  | ಬಿ.ಎಸ್. ಪದ್ಮನಾಭ್ ಮತ್ತು ಕುಟುಂಬದವರು | 40000/– |
|  | ಹೆಚ್. ಕೃಷ್ಣಸ್ವಾಮಿ ಮತ್ತು ವಿಜಯಲಕ್ಷ್ಮೀ ಸ್ಮರಣಾರ್ಥ ಹೆಚ್.ಕೆ. ರವಿಕಿರಣ್ | 10000/– |  | ಹೆಚ್. ಕೃಷ್ಣಸ್ವಾಮಿ ಮತ್ತು ವಿಜಯಲಕ್ಷ್ಮೀ ಸ್ಮರಣಾರ್ಥ ಹೆಚ್.ಕೆ. ಶಶಿಧರ್ | 10000/– |
|  | ಹೆಚ್. ಕೃಷ್ಣಸ್ವಾಮಿ ಮತ್ತು ವಿಜಯಲಕ್ಷ್ಮೀ ಸ್ಮರಣಾರ್ಥ ಸಂಧ್ಯಾ ನಾಗರಾಜ್ | 5000/– |  | ಹೆಚ್. ಕೃಷ್ಣಸ್ವಾಮಿ ಮತ್ತು ವಿಜಯಲಕ್ಷ್ಮೀ ಸ್ಮರಣಾರ್ಥ ಹೇಮಾ ಕೆ. ಚಂದ್ರ | 5000/– |
|  | ದಿ॥ ಹೆಚ್. ಕೃಷ್ಣಸ್ವಾಮಿ ಮತ್ತು ದಿ॥ ವಿಜಯಲಕ್ಷ್ಮೀ ಸ್ಮರಣಾರ್ಥ ಅವರ ಪುತ್ರ ಪುತ್ರಿಯರು ಮೇಲ್ಕಂಡಂತೆ ಉದಾರ ಕೊಡುಗೆ ನೀಡಿರುತ್ತಾರೆ. | | | | |

**ಸಾಂತ್ವನ ನಿಧಿಗಾಗಿ ಉದಾರವಾಗಿ ದೇಣಿಗೆ ನೀಡಿರುವ ಮಹನೀಯರಿಗೆಲ್ಲಾ ಕೃತಜ್ಞತಾಪೂರ್ವಕ ಧನ್ಯವಾದಗಳು**

## ಮನವಿ

**ಸಾಂತ್ವನ ನಿಧಿಗಾಗಿ ದೇಣಿಗೆ ನೀಡ ಬಯಸುವವರು ಈ ಬ್ಯಾಂಕ್ ಖಾತೆಗೆ ಹಣವನ್ನು ವರ್ಗಾಯಿಸಬಹುದು**

**MYSORE MANJAPATTUR DRAVIDA BRUHACHHARANA SANGHA**
**CANARA BANK, SARAKKI BRANCH, BENGALURU**
**ACCOUNT NO.: 110101195949**
**IFSC CODE : CNRB0000883**

# ಧಾರ್ಮಿಕ ಕ್ಷೇತ್ರ – ಕಾಚರಕನಹಳ್ಳಿ – ಒಂದು ದಿನದ ಪ್ರವಾಸ



ಬೃಹಚ್ಚರಣರ ಕೆಲವು ಕುಟುಂಬದ ಪೂರ್ವಜರು ಬೆಂಗಳೂರಿನ ಕಾಚರಕನಹಳ್ಳಿಯಲ್ಲಿ (ಈಗ ಹೆಚ್.ಬಿ.ಆರ್.ಲೇಔಟ್) ವಾಸವಾಗಿದ್ದರೆಂದು ಹಿರಿಯರಿಂದ ತಿಳಿದು ಬರುತ್ತದೆ. ನಮ್ಮ ಸಂಘದ ಸದಸ್ಯರಾಗಿರುವ ಶ್ರೀ ವೆಂಕಟರಾಮ್ (ಶಂಕರ್–9448617047), ಶ್ರೀ ನಾಗರಾಜ್ ಸುಬ್ಬರಾವ್ (9845523145) ಹಾಗೂ ಶ್ರೀ ವಿಶ್ವೇಶ್ವರನ್‌ರವರು ಈಗಲೂ ಅಲ್ಲೇ ವಾಸವಾಗಿದ್ದಾರೆ.

ಕಾಚರಕನಹಳ್ಳಿಯ ಕೆರೆ ಮುಚ್ಚಿ, ಆ ಸ್ಥಳದಲ್ಲಿ ಕಸಾಯಿಖಾನೆ ಬರಬಾರದೆಂದು, ಸುತ್ತಮುತ್ತಲಿನ ಏಳು ಹಳ್ಳಿಯ ಜನ ಒಟ್ಟುಗೂಡಿ ಸಾರ್ವಜನಿಕರ ಸಹಾಯ, ಸಹಕಾರದಿಂದ ದೇವಸ್ಥಾನಗಳ ಸಮುಚ್ಚಯ ಮಾಡಿರುವುದು ಜನ ಮೆಚ್ಚುಗೆ ಪಡೆದಿದೆಯೆಂದು ತಿಳಿದು ಬಂದಿದೆ.

ಕಾಚರಕನಹಳ್ಳಿಯಲ್ಲಿ ಕಾಣಬರುವ ದೇವಾಲಯಗಳು ಇಂತಿವೆ.

1. ಸೀತಾ ಸಮೇತ "ಕೋದಂಡರಾಮ" ದೇವಸ್ಥಾನ, "ಆಂಜನೇಯ" ಹಾಗೂ ಪಕ್ಕದಲ್ಲಿ "ವಳ್ಳಿ–ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯ" ಪ್ರತಿಷ್ಠಾಪನೆಗೊಂಡಿದ್ದು, ದೊಡ್ಡದಾದ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ. ಪ್ರತಿ ಶನಿವಾರ ಭಕ್ತಾದಿಗಳಿಗೆ ಅನ್ನದಾನವಿರುತ್ತದೆ.
2. ಆರ್ಯವೈಶ್ಯ ಸಮಾಜದವರು "ಕನ್ನಿಕಾ ಪರಮೇಶ್ವರಿ" ದೇವಸ್ಥಾನ ನಿರ್ಮಿಸಿದ್ದು, ಪ್ರತಿ ಶುಕ್ರವಾರ ಅನ್ನ ಪ್ರಸಾದ ವಿನಿಯೋಗದ ವ್ಯವಸ್ಥೆ ಇದೆ.
3. ಶಿರಡಿ ಸಾಯಿಬಾಬಾ ಮಂದಿರ. ಇಲ್ಲಿ ಶಿರಡಿಯಿಂದ ಧುನಿ (ಅಗ್ನಿ) ತಂದು ಆರದಂತೆ "ದಿವ್ಯ ಅಗ್ನಿ ದರ್ಶನ" ಏರ್ಪಡಿಸಿದೆ. ಪ್ರತಿ ಗುರುವಾರ ವಿಶೇಷ ಪೂಜೆ ಏರ್ಪಡಿಸಲಾಗಿದೆ.
4. ಇಸ್ಕಾನ್ ಸಂಸ್ಥೆಯ "ಶ್ರೀ ನರಸಿಂಹಸ್ವಾಮಿ" ಮತ್ತು "ಬಲರಾಮ–ಕೃಷ್ಣ–ರಾಧೆ" ದೇವಾಲಯವಿದೆ. ಅಲ್ಲದೆ ಇವರು ಸುಂದರವಾದ ಗೋಶಾಲೆಯನ್ನು ನಿರ್ವಹಿಸುತ್ತಿದ್ದಾರೆ.
5. ಅರವತ್ತೆಂಟು ಅಡಿ ಎತ್ತರದ ಬೃಹದ್ರೂಪಿ "ಆಂಜನೇಯ ಸ್ವಾಮಿ" – ಭುಜಗಳ ಮೇಲೆ ರಾಮ–ಲಕ್ಷ್ಮಣರನ್ನು ಹೊತ್ತುಕೊಂಡಿರುವಂತೆ ಇರುವ ಬೃಹದಾಕಾರದ ವಿಗ್ರಹವು ಪ್ರತಿಷ್ಠಾಪನೆಗೆ ಸಿದ್ಧವಾಗಿದೆ.

ಪ್ರತಿ ದಿನವೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಹಾಗೂ ಪ್ರವಾಸಿಗರು ಈ ದೇವಾಲಯಗಳ ದರ್ಶನ ಪಡೆಯುತ್ತಿದ್ದಾರೆ. ಕೆ.ಎಸ್.ಆರ್.ಟಿ.ಸಿ. ರಿಂಗ್ ರೋಡ್ ಸರ್ವಿಸ್ ಬಸ್ ಸಂಚಾರ ವ್ಯವಸ್ಥೆ ಏರ್ಪಡಿಸಿದೆ. ಇದಲ್ಲದೆ ಚೋಳರ ಕಾಲದ "ಸೋಮೇಶ್ವರ" ಹಾಗೂ "ಚೆನ್ನಕೇಶವ" ದೇವಾಲಯಗಳು ಊರ ಒಳಗೆ ಇದೆ.

ಕಾಚರಕನಹಳ್ಳಿಯಿಂದ ಕೇವಲ ಎರಡು ಕಿಲೋಮೀಟರ್ ಅಂತರದಲ್ಲಿ, ಶೃಂಗೇರಿ ಸಾಮ್ಯದ "ಸುರಭಾರತಿ" ಸಂಸ್ಥೆಯ ಉತ್ತರಾಖಾಂಡದಲ್ಲಿರುವ ಕೇದಾರನಾಥ ದೇವಾಲಯದ ಮಾದರಿಯಲ್ಲಿ "ಶ್ರೀ ಶಾರದಾಂಬ," "ಶ್ರೀ ಶಂಕರ ಭಗವತ್ಪಾದರು" ಹಾಗೂ "ಶ್ರೀ ವೆಂಕಟರಮಣ ಸ್ವಾಮಿ" ದೇವಾಲಯವನ್ನು ನಿರ್ಮಿಸಿದ್ದು ಅಸಂಖ್ಯಾತ ಭಕ್ತರು ಆಕರ್ಷಿತರಾಗಿದ್ದಾರೆ.

ಇಲ್ಲಿರುವ ಪುಷ್ಕರಣಿಯು ದೇವಸ್ಥಾನದ ಪಾವಿತ್ರ್ಯತೆಯನ್ನು ಹೆಚ್ಚಿಸಿದೆ. ಅದಲ್ಲದೆ, ಇಲ್ಲಿನ ಮುಖ್ಯಸ್ಥ ಶ್ರೀ ಶ್ರೀನಿವಾಸ್‌ರವರು ವೇದ ಪಾಠಶಾಲೆಯನ್ನು ಪ್ರಾರಂಭಿಸಿ, ಸುವ್ಯವಸ್ಥೆಯಾಗಿ ಮುನ್ನಡೆಸುತ್ತಿದ್ದಾರೆ. ಸುಪ್ರಸಿದ್ಧ "ಬಾಣಸವಾಡಿ ಆಂಜನೇಯ" ಹಾಗೂ "ಈಶ್ವರ"ನ ದೇವಾಲಯಗಳು ಕಾಚರಕನಹಳ್ಳಿಯಿಂದ ಕೇವಲ ಮೂರು ಕಿಲೋಮೀಟರ್‌ಗಳ ಅಂತರದಲ್ಲಿದೆ.

ಸಿಟಿ ಮಾರ್ಕೆಟ್‌ನಿಂದ ಕೇವಲ 10 ಕಿಲೋಮೀಟರ್ ಮಾತ್ರ ದೂರವಿರುವ ಈ ಸ್ಥಳಕ್ಕೆ ಬಸ್ ವ್ಯವಸ್ಥೆ ಇದೆ. ಪ್ರತಿಯೊಂದು "ಬೃಹಚ್ಚರಣ" ಕುಟುಂಬವೂ ಒಂದು ದಿನ ಕಾಚರಕನಹಳ್ಳಿಯ "ದೈವ ಸಮುಚ್ಚಯಕ್ಕೆ" ಹೋಗಿ ಬರಬಹುದು.



**ಕೆ.ಸಿ.ನಟರಾಜನ್**
**9845113475**

# ಶ್ರೀ ವಾಮನನ ಜನನ



ಭಗವಂತನಾದ ನಾರಾಯಣನು ಅದಿತಿ ಮತ್ತು ಕಶ್ಯಪ ಋಷಿಗಳ ಮಗನಾಗಿ ವಾಮನ ಎಂಬ ಹೆಸರಿನಿಂದ ಜನಿಸಿದನು. ಅದಿತಿಯು ಇದಕ್ಕೆ ಮೊದಲು ಅತ್ಯಂತ ಕಠಿಣ ವ್ರತವಾದ ಪಯೋವ್ರತವನ್ನು ಕೈಗೊಂಡು ಬಹಳ ಪರಿಶ್ರಮದಿಂದ, ಭಕ್ತಿಯಿಂದ ಆ ವ್ರತವನ್ನು ನೆರವೇರಿಸಿದಳು. ಶ್ರೀಮದ್ ಭಾಗವತದಲ್ಲಿ ವಾಮನನ ಜನನದ ಸಮಯದಲ್ಲಿ ಹೇಗೆ ದೃಷ್ಟಿ ಗೋಚರನಾದ ಅಥವಾ ಕಾಣಿಸಿಕೊಂಡ ಎಂದು ವರ್ಣಿಸಿದೆ ಎಂಬುದನ್ನು ಕಡಂಬಿ ನಾರಾಯಣಾಚಾರ್ಯರು ತಮ್ಮ ಉಪನ್ಯಾಸದಲ್ಲಿ ಈ ರೀತಿ ಬಣ್ಣಿಸಿದ್ದಾರೆ.

ಅವನು ಚತುರ್ಭುಜನಾಗಿ, ಶಂಖ, ಚಕ್ರ, ಗಧಾ ಮತ್ತು ಕಮಲಧಾರಿಯಾಗಿದ್ದನು. ಅವನು ಕಪ್ಪು ವರ್ಣದವನಾಗಿದ್ದನು. ಕಮಲವದನ ಎಂದು ಹೇಳುವಂತಿತ್ತು. ಅವನ ಕರ್ಣಗಳಲ್ಲಿ ಕರ್ಣ ಕುಂಡಲಗಳು ಪ್ರಕಾಶಿಸುತ್ತಿದ್ದವು. ಅವನ ಎದೆಯಲ್ಲಿ ಶ್ರೀವತ್ಸವು ಶೋಭಿಸುತ್ತಿತ್ತು. ಅವನ ತೋಳುಗಳು ಕಂಕಣದಿಂದ ಅಲಂಕರಿಸಿತ್ತು. ಅವನ ಭುಜಗಳೂ ಒಡವೆಗಳಿಂದ ಶೃಂಗರಿಸಿತ್ತು. ಅವನ ಶಿರಸ್ಸಿನಲ್ಲಿ ರತ್ನಖಚಿತವಾದ ಕಿರೀಟವು ಶೋಭಾಯಮಾನವಾಗಿತ್ತು. ಅವನ ಪಾದದಲ್ಲಿ ಅಂದುಗೆಗಳು ಅಲಂಕರಿಸಿದ್ದವು. ಅವನು ವನಮಾಲೆಯನ್ನು ಕೊರಳಿನಲ್ಲಿ ಧರಿಸಿದ್ದನು. ಆ ಮಾಲೆಯಲ್ಲಿರುವ ಹೂವುಗಳು ದುಂಬಿಗಳನ್ನು ಆಕರ್ಷಿಸುತ್ತಿದ್ದುದರಿಂದ ಆ ಭೃಂಗಗಳು ಹೂವುಗಳ ಸುತ್ತ ಝೇಂಕರಿಸುತ್ತಿದ್ದವು. ಅವನು ಕೌಸ್ತುಭ ಮಣಿಯನ್ನು ಧರಿಸಿ ಕಾಂತಿಯುಕ್ತನಾಗಿದ್ದನು. ಅವನು ಶ್ರಾವಣ ಮಾಸದ ಶ್ರವಣ ನಕ್ಷತ್ರದಲ್ಲಿ ಉದ್ಭವಿಸಿದನು. ಅಭಿಜಿತ್ ಮುಹೂರ್ತದಲ್ಲಿ ಅವನ ಉದಯವಾಯಿತು. ದ್ವಾದಶಿ ತಿಥಿಯಲ್ಲಿ ಜನಿಸಿದ್ದರಿಂದ ಆ ದ್ವಾದಶಿ "ವಿಜಯದ್ವಾದಶಿ" ಎಂದು ಪ್ರಖ್ಯಾತವಾಗಿದೆ.

ಶ್ರೀ ವಾಮನನು ಚಂದ್ರನ ಏಳಿಗೆಯ ದಿನಗಳಲ್ಲಿ ಅಂದರೆ ಚಂದ್ರನ ಕಲೆ ವರ್ಧಿಸುವಂತಹ ಸಮಯದಲ್ಲಿ ದ್ವಾದಶಿಯಂದು ಆವಿರ್ಭವಿಸಿದನು. ಅವನು ಜನಿಸಿದ ಸಮಯದಲ್ಲಿ ಸುಸ್ವರದ, ಸುಶ್ರಾವ್ಯದ ವಾದ್ಯ ಧ್ವನಿ ಕೇಳಿ ಬಂದಿತು. ಅಪ್ಸರ ಯುವತಿಯರು ನರ್ತನವಾಡಿದರು. ಗಂಧರ್ವರು ಗಾನ ಮಾಡಿದರು. ಕಿನ್ನರರು, ಸುಪರ್ಣ ಅಂದರೆ ಗರುಡ, ಯಕ್ಷರು, ಯತಿಗಳು ಮತ್ತು ದೇವತೆಗಳು ಎಲ್ಲರೂ ಕೂಡಿ ಸಂಭ್ರಮದಿಂದ ಓಲಾಡಿದರು, ಸಂತೋಷದಿಂದ ನರ್ತನ ಮಾಡಿದರು. ಸುಶ್ರಾವ್ಯವಾಗಿ ಗಾನ ಮಾಡಿದರು. ಅದಿತಿ ಮತ್ತು ಕಶ್ಯಪರ ಆಶ್ರಮದ ಮೇಲೆ ಆಕಾಶದಿಂದ ಪುಷ್ಪವೃಷ್ಟಿಯಾಯಿತು.

ಅದಿತಿ ಮತ್ತು ಕಶ್ಯಪರು ತಮ್ಮ ಮಗನನ್ನು ಸಾವಧಾನವಾಗಿ ನೋಡುತ್ತಿರುವಾಗಲೇ ಅವನು ಬ್ರಹ್ಮಚಾರಿಯ ರೂಪವನ್ನು (ಹೊಂದಿದನು) ಕೈಗೊಂಡನು. ಋಷಿಗಳು ಅವನ ಉಪನಯನವನ್ನು ವಿಜೃಂಭಣೆಯಿಂದ ಸಾಂಗವಾಗಿ ನೆರವೇರಿಸಿದರು. ಸೂರ್ಯನಾರಾಯಣನು ಗಾಯತ್ರಿ ಮಂತ್ರವನ್ನು ಉಪದೇಶಿಸಿದನು. ಬೃಹಸ್ಪತಿಯು ಪವಿತ್ರ ನೂಲಿನಿಂದ ಕೂಡಿದ ಯಜ್ಞೋಪವೀತವನ್ನು ಧಾರಣೆ ಮಾಡಿಸಿದನು. ತಂದೆಯಾದ ಕಶ್ಯಪ ಮಹಾಮುನಿಯು ಮುಂಜಾ ಹುಲ್ಲಿನಿಂದ ಮಾಡಿದ ಮೌಂಜಿ ಅಂದರೆ ಉಡುದಾರ ಅಥವಾ ಕಟಿ ಬಂಧವನ್ನು ಕೊಟ್ಟನು. ಚಂದ್ರನು ದಂಡವನ್ನು ಉಡುಗೊರೆಯಾಗಿ ಕೊಟ್ಟನು. ಬ್ರಹ್ಮನು ಕಮಂಡಲವನ್ನು ಪಾರಿತೋಷಕವಾಗಿ ಕೊಟ್ಟನು. ಸಪ್ತ ಋಷಿಗಳು ದರ್ಭೆಯ ಹುಲ್ಲನ್ನು ಒಪ್ಪಿಸಿದರು. ಕುಬೇರನು ಭಿಕ್ಷಾ ಪಾತ್ರೆಯನ್ನು ಬಹುಮಾನಿಸಿದನು. ಉಮಾದೇವಿಯು ಆ ವಟುವಿಗೆ ಮೊದಲ ಭಿಕ್ಷೆಯನ್ನು ನೀಡಿದಳು. ಉಪನಯನವಾದ ನಂತರ ಸ್ಥಳವನ್ನು ಶುದ್ಧೀಕರಿಸಿ ನಾಲ್ಕು ದಿಕ್ಕುಗಳಲ್ಲೂ ವ್ಯವಸ್ಥಿತ ಸ್ಥಳದಲ್ಲಿ ದರ್ಭೆಗಳನ್ನಿರಿಸಿ ವಾಮನನು ಯಜ್ಞವನ್ನು ಮಾಡಿದನು. ಹೋಮವು ಸಂಪೂರ್ಣವಾಗಿ ಮುಗಿದ ನಂತರ ಸಮಿತ್ತು ದಾನವನ್ನು ನೀಡಿದನು.



**ಜಿ.ಪಿ. ಲಕ್ಷ್ಮೀದೇವಿ**
**9900128835**

# ಆನಂದ ರಾಮಾಯಣದ ಒಂದು ಸನ್ನಿವೇಶ

ಶ್ರೀಮದ್ ಪರಮಹಂಸ ಪರಿವ್ರಾಜಕ ಕಾಶಿ ಸಚ್ಚಿದಾನಂದ ಸರಸ್ವತಿಗಳ ವಿರಚಿತ ಆನಂದ ರಾಮಾಯಣದ ಒಂದು ಸನ್ನಿವೇಶವನ್ನು ತಿಳಿಸಲು ಬಯಸುತ್ತೇನೆ. ದಶರಥನ ತಂದೆ ಅಜ ಮಹಾರಾಜನು ತನ್ನ ಪಟ್ಟಮಹಿಷಿ ಅಸುನೀಗಿದ ದುಃಖದಲ್ಲಿ ತಾನೂ ಪಾಯೋಪ್ರವೇಶ ಮಾಡಿದನು. ಆದ್ದರಿಂದ ಕಿರಿಯ ವಯಸ್ಸಿನಲ್ಲೇ ದಶರಥನಿಗೆ ರಾಜ್ಯಭಾರದ ಜವಾಬ್ದಾರಿ ದೊರಕಿತು. ಆತನು ದಕ್ಷತೆಯಿಂದ ರಾಜ್ಯವನ್ನು ಆಳುತ್ತಿದ್ದನು.

ದಶರಥನಿಗೆ ವಿವಾಹ ಯೋಗ್ಯ ವಯಸ್ಸು ಪ್ರಾಪ್ತವಾದಾಗ ಪಕ್ಕದ ಕೋಸಲ ದೇಶದ ರಾಜ ತನ್ನ ಮಗಳಾದ ಕೌಸಲ್ಯಳನ್ನು ಆತನಿಗೆ ಕೊಟ್ಟು ವಿವಾಹ ಮಾಡುವ ಉದ್ದೇಶದಿಂದ ಸಕಲ ತಯಾರಿಗಳನ್ನು ಮಾಡಿ ನಿಶ್ಚಿತಾರ್ಥವನ್ನು ಮಾಡಿದ್ದನು. ಇದೇ ಸಂಭ್ರಮಾಚರಣೆಯ ಸಮಯದಲ್ಲಿ ದಶರಥನು ತನ್ನ ಪರಿವಾರ, ರಕ್ಷಕರು ಮತ್ತು ಭಟರೊಂದಿಗೆ ಜಲವಿಹಾರಕ್ಕೆ ತೆರಳಿದನು. ಮಂತ್ರಿ ಸುಮಂತ್ರನೊಂದಿಗೆ ದಶರಥನು ದೋಣಿಯಲ್ಲಿ ಕುಳಿತು ಪ್ರಕೃತಿ ಸೌಂದರ್ಯ ಸವಿಯುತ್ತ ಜಲವಿಹಾರ ಮಾಡುತ್ತಿದ್ದನು. ಇತ್ತ ಕೋಸಲದಲ್ಲೂ ವಿವಾಹ ಸಿದ್ಧತೆ ಭರದಿಂದ ಸಾಗುತ್ತಿತ್ತು.

ಸ್ವರ್ಣಲಂಕೆಯಲ್ಲಿದ್ದ ರಾವಣನು ದೇವತೆಗಳೊಂದಿಗೆ ಯುದ್ಧದಲ್ಲಿ ಗೆದ್ದು ದೇವತೆಗಳನ್ನೆಲ್ಲಾ ತನ್ನ ಅಡಿಯಾಳಾಗಿ ಮಾಡಿಕೊಂಡು ಅವರಿಂದ ವಿಧ ವಿಧವಾದ ಕಾರ್ಯಗಳನ್ನು ಮಾಡಿಸಿಕೊಳ್ಳುತ್ತಿದ್ದನು. ಅದರಂತೆ ಚತುರ್ಮುಖ ಬ್ರಹ್ಮನಿಗೆ ಪ್ರತಿದಿನ ಪಂಚಾಗ ಓದಿ ಹೇಳುವ ಕೆಲಸ ವಹಿಸಿದ್ದನು. ಅಂದು ಲಂಕೇಶ್ವರನು ಬ್ರಹ್ಮನನ್ನು ತನಗೆ ಯಾವಾಗ ಮೃತ್ಯು ಬರುತ್ತದೆ ಎಂದು ಕೇಳಿದನು. ಬ್ರಹ್ಮನು ದಶರಥ ಮತ್ತು ಕೌಸಲ್ಯರಿಗೆ ವಿವಾಹವಾಗಿ ಅವರಿಗೆ ಜನಿಸುವ ಪುತ್ರನಿಂದ ಮರಣ ಎಂದು ರಾವಣನಿಗೆ ಹೇಳಿದನು. ರಾವಣನು ಇದನ್ನು ಬದಲಾಯಿಸಲು ಬ್ರಹ್ಮನಿಗೆ ಹೇಳಿದನು. ಬ್ರಹ್ಮಲಿಖಿತವಾದ ಇದನ್ನು ತನ್ನಿಂದಲೂ ಬದಲಾಯಿಸಲು ಸಾಧ್ಯವಿಲ್ಲ; ಹುಟ್ಟಿದ ಪ್ರತಿಯೊಂದು ಜೀವವು ಮರಣವನ್ನು ಹೊಂದಲೇಬೇಕು ಎಂದನು. ಆಗ ರಾವಣನು ಅಹಂಕಾರದಿಂದ ತಾನು ಇದನ್ನು ಬದಲಾಯಿಸುತ್ತೇನೆ ಎಂದು ಹೊರಟನು. ಅತ್ತ ನೌಕಾವಿಹಾರದಲ್ಲಿದ್ದ ಸುಮಂತ್ರ ಮತ್ತು ದಶರಥನನ್ನು ಜಲಪಾಲು ಮಾಡಿದನು ಮತ್ತು ಕೋಸಲದಲ್ಲಿದ್ದ ಕೌಸಲ್ಯಳನ್ನು ಅಪಹರಿಸಿ, ಒಂದು ಪೆಟ್ಟಿಗೆಯಲ್ಲಿಟ್ಟು ಅದನ್ನು ಒಂದು ತಿಮಿಂಗಿಲದ ಬಾಯಲ್ಲಿ ಇಟ್ಟು ತಾನು ಹೇಳುವವರೆಗೂ ಜೋಪಾನವಾಗಿಟ್ಟುಕೊಳ್ಳಲು ಆಜ್ಞಾಪಿಸಿದನು. ಈ ರೀತಿ ಮಾಡಿದರೆ ದಶರಥ ಮತ್ತು ಕೌಸಲ್ಯ ವಿವಾಹವೇ ನಡೆಯದೆ ಅವರಿಗೆ ಪುತ್ರ ಜನನ ಸಾಧ್ಯವಿಲ್ಲ ಎಂದು ರಾವಣನ ಎಣಿಕೆಯಾಗಿತ್ತು. ಬ್ರಹ್ಮನನ್ನು ಕರೆದು ದಶರಥನು ನೀರು ಪಾಲಾದನು, ಕೌಸಲ್ಯಳು ಅಪಹರಣಕ್ಕೊಳಗಾಗಿ ಅಜ್ಞಾತ ಸ್ಥಳದಲ್ಲಿರುವಳು. ಇನ್ನೆಲ್ಲಿ ಅವರಿಬ್ಬರಿಗೆ ವಿವಾಹವಾಗುವುದು, ಪುತ್ರ ಜನನವಾಗುವುದು ಮತ್ತು ತನ್ನ ಸಾವಾಗುವುದು ಎಂದು ದರ್ಪದಿಂದ ಅಬ್ಬರಿಸಿದನು. ಬ್ರಹ್ಮನು ಇದು ಸಾಧ್ಯವೇ ಇಲ್ಲ, ದೈವ ಸಂಕಲ್ಪದಂತೆ ಎಲ್ಲವೂ ನಡೆಯುತ್ತದೆ ಎಂದನು.

ಜಲದಲ್ಲಿ ಮುಳುಗಿದ ಸುಮಂತ್ರ ಮತ್ತು ದಶರಥನು ಒಂದು ಹಲಗೆಯ ಸಹಾಯದಿಂದ ಮೇಲೆ ಬಂದು ತೇಲುತ್ತ, ಈಜುತ್ತ ಒಂದು ದ್ವೀಪಕ್ಕೆ ತಲುಪಿದರು. ಪೆಟ್ಟಿಗೆಯೊಂದಿಗಿದ್ದ ತಿಮಿಂಗಿಲವನ್ನು ಮತ್ತೊಂದು ತಿಮಿಂಗಿಲವು ಆಕ್ರಮಣ ಮಾಡಲು ಬಂದಾಗ ತನ್ನ ಬಾಯಲ್ಲಿದ್ದ ಆ ಪೆಟ್ಟಿಗೆಯನ್ನು ತಿಮಿಂಗಿಲವು ಅದೇ ದ್ವೀಪದಲ್ಲಿ ಇಟ್ಟಿತ್ತು. ಆಗ ಈ ಪೆಟ್ಟಿಗೆಯನ್ನು ಕಂಡ ದಶರಥನು ಕುತೂಹಲದಿಂದ ತೆರೆದಾಗ ಸರ್ವಾಭರಣ ಭೂಷಿತಳಾಗಿ ಅಲಂಕೃತಗೊಂಡ ಕೌಸಲ್ಯಳನ್ನು ಕಂಡನು. ಅಲ್ಲೇ ಗಾಂಧರ್ವ ವಿವಾಹ ಮಾಡಿಕೊಂಡನು. ಸಾಕ್ಷಿಯಾಗಿ ಸುಮಂತ್ರನಿದ್ದನು. ಆ ತಿಮಿಂಗಿಲಗಳ ಭಯದಿಂದ ಮೂವರೂ ಮತ್ತೆ ಪೆಟ್ಟಿಗೆಯಲ್ಲಿ ಅವಿತುಕೊಂಡರು. ಇವಿಷ್ಟು ಒಂದು ಕ್ಷಣದಲ್ಲಿ ನಡೆದ ಘಟನೆ. ಅತ್ತ ರಾವಣನು ಬ್ರಹ್ಮನಿಗೆ ಕೌಸಲ್ಯಳನ್ನು ತಾನು ಅಪಹರಿಸಿ ಪೆಟ್ಟಿಗೆಯಲ್ಲಿಟ್ಟಿರುವುದನ್ನು ಸಾಬೀತುಪಡಿಸಲು ತನ್ನ ರಾಕ್ಷಸ ಪಡೆಯನ್ನು ಕಳುಹಿಸಿ ಪೆಟ್ಟಿಗೆಯನ್ನು ತರಿಸಿದನು. ಪೆಟ್ಟಿಗೆಯಲ್ಲಿ ಮೂರು ಜನರಿರುವುದನ್ನು ನೋಡಿ ಆಶ್ಚರ್ಯಪಟ್ಟನು. ರಾವಣನಿಗೆ ಬ್ರಹ್ಮನು ದಶರಥ ಮತ್ತು ಕೌಸಲ್ಯರಿಗೆ ತಾನು ನಿಶ್ಚಯಿಸಿದ್ದ ಸುಮುಹೂರ್ತದಲ್ಲಿ ಗಾಂಧರ್ವ ವಿವಾಹವಾಗಿರುವುದನ್ನು ತಿಳಿಸಿದನು. ತತಕ್ಷಣವೇ ರಾವಣನು ತನ್ನ ಕತ್ತಿಯನ್ನು ಝುಳಪಿಸಿ ಅವರನ್ನು ಕೊಲ್ಲಲು ಹೊರಟನು. ಬ್ರಹ್ಮನು ಅದನ್ನು ತಡೆದು ರಾವಣನಿಗೆ ಇನ್ನೂ ಅರವತ್ತು ಸಾವಿರ ವರ್ಷಗಳ ಆಯಸ್ಸು ಇರುವುದೆಂದು ತಿಳಿಸಿ (ತ್ರೇತಾಯಗದ ಕಾಲ ಪ್ರಮಾಣದಂತೆ) ಈಗ ಒಬ್ಬರಿದ್ದವರು ಮೂವರಾಗಿರುವರು. ಇವರನ್ನು ಕೊಂದರೆ ಸಂಖ್ಯೆ ಹೆಚ್ಚಾಗಿ ಅವರೆಲ್ಲಾ ಬಂದು ಈಗಲೇ ರಾವಣನ ಕೊನೆಯಾಗಬಹುದು ಎಂದನು. ರಾವಣನ ಆಯಸ್ಸು ಬಹಳ ಕಾಲ ಇರುವುದರಿಂದ ಹೆದರಬೇಕಾಗಿಲ್ಲವೆಂದು ಅವರನ್ನು ಕೊಲ್ಲದೆ ಅವರನ್ನು ಅಯೋಧ್ಯೆಗೆ ಕಳುಹಿಸಬೇಕೆಂದು ಬ್ರಹ್ಮನು ಹೇಳಿದನು. ಈ ಮೇಲಿನ ಕಥೆಯಿಂದ ಮನುಷ್ಯನು ಅಹಂಕಾರ, ದರ್ಪ, ದುರಭಿಮಾನ ತೊರೆದು ನಮ್ಮ ಪ್ರಯತ್ನಕ್ಕೂ ಮೀರಿದ್ದು ದೈವ ಸಂಕಲ್ಪ ಎಂದು ಅರಿತು ಜೀವನ ಸಾಗಿಸಬೇಕು.



**ಭ್ರಮರಾ ಗೋಪಿನಾಥ್**

**6366701153**

# ನಮ್ಮನ್ನಗಲಿದ ನಮ್ಮವರಿಗೆ ಗೌರವಪೂರ್ಣ ಶ್ರದ್ಧಾಂಜಲಿ

| | | | | |
|---|---|---|---|---|
|  | **ಸುಮಿತ್ರಮ್ಮ** | 87 | 18.1.2023 | ಉಪಾಧ್ಯಕ್ಷ ಶ್ರೀ ಹೆಚ್.ಕೆ. ಶಶಿಧರ್‌ರವರ ಅತ್ತೆ |
|  | **ಎಸ್.ಎಲ್.ಕೆರೂರ್** | 86 | 22.1.2023 | ಸದಸ್ಯ ಶ್ರೀ ಆರ್.ಪಿ. ಅರುಣ್‌ಕುಮಾರ್‌ರವರ ಮಾವ |
|  | **ಹೆಚ್.ವಿಶ್ವನಾಥ್** | 72 | 23.1.2023 | ಸಂಘದ ಸದಸ್ಯರು ಹಾಗೂ ಸದಸ್ಯೆ ಅಮೃತಾ ವಿಶ್ವನಾಥ್‌ರವರ ತಂದೆ |
|  | **ಬಿ.ಎಸ್. ಉಮಾ ಜಯರಾಮ್** | 60 | 24.1.2023 | ಸದಸ್ಯ ಎಸ್.ಜೆ. ನಾರಾಯಣರವರ ತಾಯಿ |
|  | **ಕೆ. ಶಾಂತಾ** | 88 | 26.1.2023 | ಸದಸ್ಯ ವಿ. ರವಿಯವರ ತಾಯಿ |
|  | **ಟಿ.ಎಸ್. ಹೇಮಾ** | 58 | 6.2.2023 | ಸದಸ್ಯ ಹಾಗೂ ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಎಸ್. ರಮೇಶ್‌ರವರ ಸಹೋದರಿ |
|  | **ಎಸ್. ನಾಗಮಣಿ ಶಾಮಣ್ಣ** | 78 | 28.2.2023 | ಸಂಘದ ಮಹಾಪೋಷಕರಾದ ಶ್ರೀಮತಿ ಇಂದಿರಮ್ಮರವರ ಸಹೋದರಿ |
|  | **ಕೆ. ಗೋವಿಂದರಾಜು** | 69 | 18.3.2023 | ಸಂಘದ ಸದಸ್ಯರು |
|  | **ಸರಸ್ವತಿ** | 64 | 09.4.2023 | ಸದಸ್ಯ ಎಸ್.ಎ. ಮಂಜುನಾಥ್‌ರವರ ಪತ್ನಿ |

**ದಿನಾಂಕ 01–04–2023ರಿಂದ ಜಾರಿಗೆ ಬಂದ ಸಾಂತ್ವನ ನಿಧಿ ಕಾರ್ಯಕ್ರಮವು ವಿಧಿವಶಾತ್ ಮೊದಲ ಬಾರಿಗೆ ಹತ್ತನೇ ತಾರೀಖು ಶ್ರೀಮತಿ ಸರಸ್ವತಿ (ಸಂಘದ ಸದಸ್ಯ ಶ್ರೀ ಎಸ್.ಎ. ಮಂಜುನಾಥ್ ಅವರ ಪತ್ನಿ) ಅವರ ನಿಧನದಿಂದಾಗಿ ಅವರ ಕುಟುಂಬಕ್ಕೆ ಅನ್ವಯಿಸಲ್ಪಟ್ಟಿದೆ. ಕಾರ್ಯಕಾರಿ ಸಮಿತಿಯ ಸದಸ್ಯರು ಅಂದು ಮೃತರ ನಿವಾಸದಲ್ಲಿ ಅವರ ಪತಿ, ಪುತ್ರರು ಮತ್ತಿತರರನ್ನು ಭೇಟಿಯಾಗಿ, ಸಂತಾಪ ಸೂಚಿಸಿ ಕೆಲ ಸಮಯ ಅವರೊಡನಿದ್ದು, ನಂತರ ಪೂರ್ವನಿರ್ಧಾರಿತ ಸಾಂತ್ವನ ಮೊತ್ತವನ್ನು ಸಂಘದ ವತಿಯಿಂದ ಸಲ್ಲಿಸಿರುತ್ತಾರೆ. ಈ ಸಲ್ಲಿಕೆಯನ್ನು ಮೃತರ ಕುಟುಂಬದವರು ಸಹೃದಯತೆಯಿಂದ ಸ್ವೀಕರಿಸಿ ಸಹಕರಿಸಿರುತ್ತಾರೆ.**

## ವಾರ್ಷಿಕ ನಿರ್ವಹಣಾ ವೆಚ್ಚ (ವರ್ಷಕ್ಕೆ ರೂ. 500/-) ನೀಡಿದ ಸದಸ್ಯರು

ಗಿರಿಜಾ ದೇವಿ ಎಂ.
ಗಣೇಶ್ ಹೆಚ್.ಡಿ.
ಅರುಣ್ ಹೆಚ್.ಜಿ.
ಸಂಧ್ಯಾ ಬಿ.ಇ.
ರಾಜಲಕ್ಷ್ಮಿ ಆರ್.
ರಮೇಶ್ ಆರ್.
ಲಲಿತಾ ಹೆಚ್.ಆರ್.
ಡಾ॥ ಸುಮಾ ಪ್ರಹ್ಲಾದ್ ಸರಾಫ್
ರವಿಶಂಕರ್ ಎಸ್.
ವೈದ್ಯನಾಥ್ ಎ.ಎಸ್.
ಕೃಷ್ಣ ಎಸ್.
ನಟರಾಜನ್ ಕೆ.ಸಿ.
ಸರಸ್ವತಿ ನಟರಾಜನ್
ಶುಭ ಗಾಯತ್ರಿ ಎನ್.
ಶಿವಕುಮಾರ್ ಎನ್.
ಮಮತಾ ಶಿವಕುಮಾರ್
ಜಯರಾಮ್ ಕೆ.ಸಿ.
ಅರುಣ್ ಜೆ ಕಾರ್ತಿಕ್
ರಾಧಾ ನಾಗರಾಜ್
ಮುರಳಿಕೃಷ್ಣ ಸಿ.
ಅಶ್ವಿನಿ ವೆಂಕಟೇಶ್
ವೆಂಕಟೇಶ್ ಆರ್.ಎಸ್.
ಲಲಿತಾ ಮೂರ್ತಿ
ಬಾಲಸುಬ್ರಹ್ಮಣ್ಯ ಜಿ.ವಿ.
ಶ್ರೀಕಾಂತ್ ಆರ್.ಎ.
ಶ್ಯಾಮಸುಂದರ ಆರ್.ಎ.
ತಾರಾ ರವೀಂದ್ರ
ಲತಾ ಎಸ್.ಆರ್.
ರೂಪ ವಿಶ್ವೇಶ್
ರಮಾ ಸುಬ್ಬರಾವ್
ರವಿಶಂಕರ್ ಜಿ.ಎಸ್.
ವೆಂಕಟೇಶ್ ಹೆಚ್.
ಅಂಜನ್ ಕುಮಾರ್ ಎಂ.
ಆಶ್ವತ್ಥ್ ರಾಜಾರಾವ್
ಸತ್ಯಮೂರ್ತಿ ಡಿ.
ವಿಶ್ವೇಶ್ವರನ್ ಡಿ.
ಶ್ರೀಧರ್ ಬಿ.
ರಘುನಾಥ್ ಇ.
ಪ್ರದೀಪ್ ಎಸ್.
ಕರ್ನಲ್ ರಾಜನ್ ವಿ.ಜಿ.
ಸ್ವಾಮಿನಾಥನ್ ಆರ್.ಎನ್.
ಶ್ರೀನಿವಾಸನ್ ಕೆ.ಎಸ್.
ಶ್ರೀನಿವಾಸಯ್ಯ ಎಸ್.
ಶ್ರೀನಾಥ್ ಎಲ್.
ಪದ್ಮನಾಭನ್
ಗಾಯತ್ರಿ ದೇವಿ
ಸುಂದರ್ ಎನ್.ವಿ.
ಪದ್ಮಜಾ ಶ್ರೀನಿವಾಸನ್
ಡಾ॥ ಶಶಿಕುಮಾರ್ ಎಂ.ಎಸ್.
ಗಣಪತಿ ವೈ.ಆರ್.
ವೇಣುಗೋಪಾಲ್ ಎಸ್.
ಡಾ॥ ಸ್ವಾಮಿನಾಥ್ ಜಿ.
ಅಶೋಕ್ ಕುಮಾರ್ ಜಿ.
ಶಶಿಕಲಾ ಪಿ.
ರವಿಶಂಕರ್ ಕೆ.ವಿ.
ಕುಪ್ಪುಸ್ವಾಮಿ
ಶ್ರೀನಿವಾಸನ್ ಎ.ವಿ.
ರವಿ ಸರ್ಜಾಪುರ
ಕಿರಣ್ ಪಾರ್ಥಸಾರಥಿ
ವಿಶ್ವನಾಥ್ ಎಸ್.
ಲಕ್ಷ್ಮಣ ಶರ್ಮ ಬಿ.ಎ.
ಸೂರ್ಯಪ್ರಕಾಶ್ ಬಿ.ಎ.
ಸತೀಶ ಬಿ.ಎಸ್.

## ಪಂಚೆ, ಶಲ್ಯ ಮತ್ತು ನೀರು ಪ್ರಾಯೋಜಕರು

ಪ್ರತಿ ವರ್ಷದಂತೆ ಈ ಸಲವು ಕೆಲ ಸದಸ್ಯರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ಸೇರಿ ನಾಗಾರಾಧನೆಯಂದು ಬಾಣಸಿಗರಿಗೆ ಪಂಚೆ, ಶಲ್ಯ ಮತ್ತು ಭಕ್ತಾಧಿಗಳಿಗೆ ಕುಡಿಯುವ ನೀರು ಪ್ರಾಯೋಜಿಸಿದರು.

# ಅನ್ನ ಸಂತರ್ಪಣೆ ನಿಧಿಗೆ ದೇಣಿಗೆ ನೀಡಿದ ಸದಸ್ಯರು/ಸಮುದಾಯದವರು (ರೂ. ಗಳಲ್ಲಿ)

| | |
|---|---|
| ಸೂರ್ಯನಾರಾಯಣ ಜಿ.ಎಸ್. | 25000/– |
| ವೈಜಯಂತಿ | 5000/– |
| ಕಾವ್ಯಾ | 500/– |
| ನವ್ಯಾ | 500/– |
| ಗಣೇಶ್ ಎಚ್.ಡಿ. | 2000/– |
| ಧೀಮಂತ್ ಕುಮಾರ್ | 2000/– |
| ಸುಲೋಚನಾ ರಾವ್ | 2000/– |
| ವಿದ್ಯಾ ಮೂರ್ತಿ | 10000/– |
| ರಾಜೇಶ್ವರಿ ಎಸ್.ಜಿ. | 2000/– |
| ಅಶ್ವತ್ಥನಾರಾಯಣ ರಾವ್ ಕೆ.ಎಸ್. | 5000/– |
| ಪವಮಾನ್ ಎಸ್. | 1500/– |
| ರಾಜಲಕ್ಷ್ಮಿ ಆರ್. | 500/– |
| ಬಿಂದು ವೆಂಕಟೇಶ್ | 1000/– |
| ವಿಶ್ವಾಸ್ ಆರ್.ಎಚ್. | 3000/– |
| ಗೋಪಾಲಕೃಷ್ಣ ಆರ್. | 500/– |
| ಪರಿಮಳಾ ಎಸ್.ಸಿ. | 500/– |
| ಸತ್ಯನಾರಾಯಣ ಎಂ.ಆರ್. | 500/– |
| ರಾಮಮೂರ್ತಿ ಬಿ.ಸಿ. | 3000/– |
| ಪ್ರಭಾಕರ್ ಎನ್. | 2000/– |
| ರವೀಂದ್ರ ಕುಮಾರ್ | 500/– |
| ಡಾ॥ ಸುಮಾ ಪಿ. ಸರಾಫ್ | 1000/– |
| ಗೌರಿ ಬಿ. ನಟರಾಜ | 1000/– |
| ಅನಿಲ್ ಕುಮಾರಸ್ವಾಮಿ ಸೇಲಂ | 1000/– |
| ಅನಂತ್ ಎಚ್.ಜಿ. | 2000/– |
| ರವಿಶಂಕರ್ ಎಸ್. | 1000/– |
| ಗೋಪಿ | 500/– |
| ರಾಮು | 1000/– |
| ವಿಜಯದೇವ್ ಎಸ್. | 500/– |
| ರವಿಶಂಕರ್ ಆರ್.ಎಸ್. | 1001/– |
| ಸುಬ್ರಹ್ಮಣ್ಯ ಎಸ್.ಜಿ. | 1000/– |
| ರುಕ್ಮಿಣಿ ಗಿಣಿ | 50000/– |
| ಕೃಷ್ಣ ಎಸ್. | 700/– |
| ಶಕುಂತಲ | 500/– |
| ಅರುಣ್ ವೆಂಕಟಸುಬ್ಬರಾವ್ | 1000/– |
| ಸುಬ್ಬರಾವ್ ವಿ. | 1000/– |
| ಉಮೇಶ್ ಎಸ್. | 2000/– |
| ಶಿವರಾಮನ್ ಚಂದ್ರನ್ | 250/– |
| ಉಮಾ ಎನ್. ಗೋವಿಂದ್ | 500/– |
| ಸರೋಜಾ ಕೆ.ಎಲ್. | 500/– |
| ರಘುನಂದನ್ ಎ.ಜಿ. | 500/– |
| ಭಾರತಿ ಎಂ.ಎಸ್. | 500/– |
| ಉಷಾ ರಾಣಿ ಎಂ.ಎಸ್. | 500/– |
| ಸಾವಿತ್ರಿ ಬಿ.ವಿ. | 2500/– |
| ವಿದ್ಯಾಶ್ರೀ | 500/– |
| ಶ್ರೀನಿವಾಸಮೂರ್ತಿ | 500/– |
| ಜಯರಾಮ್ ಕೆ.ಸಿ. | 200/– |
| ಪ್ರಮೀಳಾ ಕೆ.ಸಿ. | 100/– |
| ನಾಗರಾಜ ಜಿ.ಎಸ್. | 500/– |
| ಗೋವಿಂದರಾಜು ಬಿ.ಎಸ್. | 500/– |
| ಶರ್ಮ ಕೆ.ಬಿ.ಎಸ್. | 500/– |
| ಭರತ್ ಶರ್ಮ | 500/– |
| ಪ್ರಭಾ ನಾಗರಾಜ್ | 500/– |
| ಕಾಂಚನಾ ಶ್ರೀನಿವಾಸ್ | 500/– |
| ಧಾತ್ರಿ ಆರ್. ಪ್ರಸಾದ್ | 1000/– |
| ನಾಗರಾಜ್ ಡಿ.ಕೆ. | 200/– |
| ಶಶಿಧರ್ ಎಚ್.ಕೆ. | 500/– |
| ರಮೇಶ್ ಎನ್.ವಿ. | 205/– |
| ರಮೇಶ್ ಎನ್.ವಿ. | 1000/– |
| ಬಾಲಸುಬ್ರಹ್ಮಣ್ಯ ಜಿ.ವಿ. | 500/– |
| ಶ್ರೀಕಾಂತ್ ಆರ್.ಎ. | 500/– |
| ಅಡಿಗ ಎನ್.ಎಂ. | 100/– |
| ಭಾರ್ಗವ್ ಆರ್.ಎಸ್. | 500/– |
| ಅರುಣ್ ಮಂಜುನಾಥ | 500/– |
| ರವಿಶಂಕರ್ ಆರ್.ಪಿ. | 500/– |
| ಇಂದ್ರಮ್ಮ ಎಸ್. | 1000/– |
| ಸತ್ಯಮೂರ್ತಿ ಜಿ.ಎಸ್. | 1000/– |
| ಪದ್ಮ ಗಂಗಾಧರ್ | 1400/– |

## ಅನ್ನ ಸಂತರ್ಪಣೆ ನಿಧಿಗೆ ದೇಣಿಗೆ ನೀಡಿದ ಸದಸ್ಯರು/ಸಮುದಾಯದವರು (ರೂ. ಗಳಲ್ಲಿ)

| | |
|---|---|
| ಉಷಾ ರಘುವೀರ್ | 500/– |
| ಕೃಷ್ಣ ಮೂರ್ತಿ (ತಾರಾ) | 5000/– |
| ಕಾರ್ತಿಕ್ ಎಂ.ಎನ್. | 150/– |
| ಜನಾರ್ದನ್ ಬಿ.ಎಸ್. | 1001/– |
| ಸೂರ್ಯ ಪ್ರಕಾಶ್ ಎನ್.ವಿ. | 500/– |
| ವೆಂಕಟೇಶ್ ಎಚ್. | 1000/– |
| ಪಾರ್ವತಿ ರಾಧಾಕೃಷ್ಣ | 500/– |
| ಕುಮಾರ್ ಆರ್.ಎನ್. | 501/– |
| ದಾನಪ್ಪ ಅಮ್ಮಯ್ಯಮ್ಮ ಮತ್ತು ಕುಟುಂಬ (ಸತ್ಯ ಮೂರ್ತಿ ಡಿ) | 2000/– |
| ಕರ್ನಲ್ ರಾಜನ್ ವಿ.ಜಿ. | 500/– |
| ನಾಗರಾಜ್ ಕೆ.ಆರ್. | 200/– |
| ಸ್ವಾಮಿನಾಥನ್ ಆರ್.ಎನ್. | 500/– |
| ರವಿಪ್ರಕಾಶ್ ಎಂ.ಕೆ. | 200/– |
| ವೆಂಕಟಸುಬ್ಬರಾವ್ ಆರ್.ಎನ್. | 500/– |
| ವಿಮಲಾ | 1000/– |
| ಪಂಕಜಾ ಮೂರ್ತಿ | 500/– |
| ಪದ್ಮನಾಭನ್ | 500/– |
| ಸುಂದರ್ ಎನ್.ವಿ. | 1000/– |
| ಗಾಯತ್ರಿದೇವಿ | 1000/– |
| ಲಕ್ಷ್ಮಿದೇವಿ ಜಿ.ಪಿ. | 2000/– |
| ಉಮಾ ಬಿ.ಎಸ್. ಸ್ಮರಣಾರ್ಥ | 5000/– |
| ಮುರಳೀಧರ್ ಆರ್.ಎನ್. | 200/– |
| ರುಕ್ಮಿಣಿ ಎಸ್. ರಾಮ್ | 1000/– |
| ರವಿಶಂಕರ ಕೆ.ವಿ. | 500/– |
| ಕುಪ್ಪುಸ್ವಾಮಿ | 1000/– |
| ಶ್ರೀನಿವಾಸ ಕೆ.ಜಿ. | 1000/– |
| ಬಾಲಸುಬ್ರಮಣಿ ಎಸ್. | 1000/– |
| ಶ್ರೀನಿವಾಸನ್ ಎ.ವಿ. | 500/– |
| ಸೂರ್ಯಪ್ರಕಾಶ್ | 200/– |
| ಶಾಂತಾಕುಮಾರಿ | 500/– |
| ಸುಬ್ಬಲಕ್ಷ್ಮಿ ಬಿ.ಕೆ. | 2000/– |
| ಸೋಮಸುಂದರ ಎಸ್. | 5000/– |
| ಪ್ರಜ್ವಲ್ ಬಿ.ಕೆ. | 1000/– |
| ಸುಧಾಲಕ್ಷ್ಮಿ ಎನ್. | 1000/– |
| ಕುಮಾರ್ ಬಿ.ಸಿ. | 1000/– |
| ರವಿ ಸರ್ಜಾಪುರ್ | 500/– |
| ಶ್ರೀನಿವಾಸ್ | 200/– |
| ಕೃಷ್ಣಮೂರ್ತಿ | 501/– |
| ಕಿರಣ್ ಪಾರ್ಥಸಾರಥಿ | 1001/– |
| ನಾರಾಯಣರಾವ್ ಆರ್.ಎ. | 1001/– |
| ಶ್ರೀನಿವಾಸ್ ಸರ್ಜಾಪುರ | 100/– |
| ಸತೀಶ ಬಿ.ಎಸ್. | 1000/– |
| ಸೂರ್ಯಪ್ರಕಾಶ್ ಬಿ.ಎ. | 1000/– |
| ಶ್ರೀಹರಿ ಕಶ್ಯಪ್ | 500/– |
| ಪಾರ್ವತಿದೇವಿ | 100/– |
| ದೀಪಿಕಾ ರಾಜೇಶ್ | 502/– |
| ನಾಗರತ್ನ ಶ್ರೀಧರ್ ಆರ್.ಕೆ. | 501/– |
| ರಾಜಲಕ್ಷ್ಮಿ ಎಸ್. ರಾವ್ | 501/– |
| ದೀಪ್ತಿ ಎಂ.ಎಸ್. | 502/– |
| ಗಾಯತ್ರಿ ಸತ್ಯನಾರಾಯಣ | 101/– |
| ವೀಣಾ ವೆಂಕಟೇಶ್ | 102/– |
| ಪ್ರಭಾವತಿ ರಾಮಕೃಷ್ಣ ವಿ. | 1000/– |
| ಭಗವಾನ್ ಆರ್.ಎಸ್. | 500/– |
| ಹನುಮಂತನ್ ಕೆ. | 500/– |
| ರಾಧಾಕೃಷ್ಣ ಆರ್. | 500/– |
| ನರಸು ರಾಮಚಂದ್ರ | 1000/– |
| ಸುರೇಶ್ ಕೆ.ಬಿ. | 1000/– |
| ಸುಬ್ರಹ್ಮಣ್ಯಂ | 200/– |
| ಸುಬ್ರಹ್ಮಣ್ಯಂ ಬಿ. | 1000/– |

## ಸಾಂತ್ವನ ನಿಧಿಗಾಗಿ ದೇಣಿಗೆ ನೀಡಿರುವ ಸದಸ್ಯರು

| | |
|---|---|
| ಹರಿಪ್ರಸಾದ್ ಆರ್.ಎನ್. | 10000/– |
| ರಾಜೇಶ್ವರಿ ಎಸ್.ಜಿ. | 5000/– |
| ಗಣೇಶ್ ಹೆಚ್.ಡಿ. | 5000/– |
| ಉಮಾ ಎನ್. ಗೋವಿಂದ್ | 5000/– |
| ಅಂಜನ್ ಕುಮಾರ್ | 1000/– |
| ಸುಬ್ಬಲಕ್ಷ್ಮೀ ಬಿ.ಕೆ. | 2000/– |
| ವೆಂಕಟೇಶ್ ಆರ್.ಎಸ್. | 25000/– |
| ನಾಗೇಶ | 5000/– |
| ಭಗವಾನ್ ಆರ್.ಎಸ್. | 501/– |
| ಪ್ರಭಾಕರ್ ಎನ್. | 2500/– |

## ನಾಗಾರಾಧನೆಗೆ  ದೇಣಿಗೆ ನೀಡಿದ ಸದಸ್ಯರು/ಸಮುದಾಯದವರು (ರೂ. ಗಳಲ್ಲಿ)

| | |
|---|---|
| ರಮೇಶ್ ಆರ್.ಎಸ್. | 10000/– |
| ಸಂಧ್ಯಾ ಬಿ.ಇ. | 3000/– |
| ಗಾಯತ್ರಿ ದೇವಿ ಡಿ.ಎನ್. | 1000/– |
| ರೇವತಿ ಸಿ. | 5001/– |
| ಶ್ರೀನಿವಾಸಮೂರ್ತಿ ವಿ. | 1001/– |
| ರಾಧಾ ರಾಧಾಕೃಷ್ಣನ್ | 2001/– |
| ಪವಮಾನ್ ಎಸ್. | 1500/– |
| ಬಾಲಸುಬ್ರಹ್ಮಣ್ಯ ಕೆ. | 1001/– |
| ಸೂರ್ಯಪ್ರಕಾಶ್ | 2000/– |
| ಗಣೇಶ್ | 3000/– |
| ವಸುಮತಿ | 1000/– |

## ಹುಂಡಿಯಿಂದ ಬಂದ ದೇಣಿಗೆ (ರೂ. ಗಳಲ್ಲಿ)

| | |
|---|---|
| ನಾಗರಾಜ ಜಿ.ಎಸ್. | 600/– |
| ಶ್ರೀನಿವಾಸ ಕೆ.ಜಿ. | 1500/– |
| ಅಶ್ವಿನಿ ವೆಂಕಟೇಶ್ | 1030/– |
| ತಾರಾ ರವೀಂದ್ರ | 800/– |
| ಲತಾ ಎಸ್.ಆರ್. | 700/– |
| ರಮಾ ಸುಬ್ಬರಾವ್ | 800/– |
| ರೂಪಾ ವಿಶ್ವೇಶ್ | 4500/– |
| ವೀಣಾ ಕಾಮತ್ | 1001/– |
| ರವಿಶಂಕರ್ ಜಿ.ಎಸ್. | 500/– |
| ಡಾ॥ ಸ್ವಾಮಿನಾಥ್ ಜಿ. | 5260/– |
| ಸುಬ್ರಹ್ಮಣ್ಯಮ್ ಬಿ. | 2520/– |
| ಅಶೋಕ್ ಕುಮಾರ್ ಜಿ. | 1580/– |
| ವೆಂಕಟೇಶ್ ಜಿ.ಎಸ್. | 1040/– |
| ಸರಸ್ವತಿ ಕೆ. | 1002/– |
| ಸುಂದರ್ ಕೆ.ಜಿ. | 180/– |
| ವಿನಯ್ ಕುಮಾರ್ | 180/– |

## ವಿದ್ಯಾ ನಿಧಿಗೆ ದೇಣಿಗೆ ನೀಡಿದ ಸದಸ್ಯರು/ಸಮುದಾಯದವರು (ರೂ. ಗಳಲ್ಲಿ)

| | |
|---|---|
| ರುಕ್ಮಿಣಿ ಗಿಣಿ | 50000/– |
| ಸಾವಿತ್ರಿ ಬಿ.ವಿ. | 2500/– |
| ಶಾಂತಲಕ್ಷ್ಮಿ ವಿ. | 1000/– |

## ಕ್ಯಾಲೆಂಡರ್ ಪ್ರಾಯೋಜಿಸಿದ ಸದಸ್ಯರು (ರೂ. ಗಳಲ್ಲಿ)

| | |
|---|---|
| ಪ್ರಶಾಂತ್ ಆರ್.ಎಸ್. | 1500/– |
| ರಮೇಶ್ ಆರ್. | 1000/– |
| ರವಿಕಿರಣ್ ಟಿ.ಎನ್. | 1500/– |
| ಸುಬ್ರಹ್ಮಣ್ಯಂ ಬಿ. | 1000/– |
| ಶಂಕರ್ ಪ್ರಸಾದ್ ಬಿ.ಆರ್. | 1000/– |
| ಅರುಣ್ ವಿ. | 1500/– |
| ಮಂಜುನಾರಾಯಣ್ ಕೆ. | 1500/– |
| ಗುಂಡಪ್ಪ ಕೆ. | 1000/– |
| ಚಂದ್ರಶೇಖರ್ ಎಸ್. | 1000/– |
| ಡಾ॥ ರಮಾದೇವಿ ಎಸ್. | 1000/– |

## ಹೊಸ ಸದಸ್ಯರು /ಪೋಷಕರು

**ಸದಸ್ಯರು**

ವಿ. ಶಾಂತಾರಾಮ್
ತ್ರಿವೇಣಿ ನರಸಿಂಹಮೂರ್ತಿ
ಆರ್.ಎನ್.ಮುರಳೀಧರ್
ಅಮೃತಾ ವಿಶ್ವನಾಥ್
ಎಂ. ಮಿಥಿಲೇಶ್
ದಿವ್ಯಾ ಶಶಾಂಕ್
ಸಾಚಿ ಶಿವಾನಿ
ಸ್ವರ

**ಪೋಷಕರು**

ಡಿ.ಎಸ್. ಗಾಯತ್ರಿ
ಜಲಜಾ ಎಸ್. ಪ್ರಕಾಶ್

**ಸಂಘವು ಹೊಸ ಸದಸ್ಯರನ್ನು / ಪೋಷಕರನ್ನು ಸ್ವಾಗತಿಸುತ್ತದೆ.**

## ಅಭಿನಂದನೆಗಳು



ಸಂಘದ ಸದಸ್ಯ ಶ್ರೀ ಆರ್.ಪಿ. ಉಮಾಶಂಕರ್ ಮತ್ತು ಶ್ರೀಮತಿ ಎನ್. ಸುಧಾ ದಂಪತಿಗಳ ಪುತ್ರಿ ಚಿ. ಪೂಜಾ ಉಮಾಶಂಕರ್‌ರವರು **CMR University** ಯವರು ನಡೆಸಿದ **Master of Laws (LLM)** ಪದವಿ ವಿಭಾಗದ **Constitutional Law** ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದು ಉತ್ತೀರ್ಣರಾಗಿ ಚಿನ್ನದ ಪದಕ ಪಡೆದಿರುತ್ತಾರೆ.

***************************



ಸಂಘದ ಸದಸ್ಯ ಶ್ರೀ ನಾಗಭೂಷಣ ಮತ್ತು ಶ್ರೀಮತಿ ರಾಜಶ್ರೀ ದಂಪತಿಗಳ ಪುತ್ರಿ ಚಿ. ಸಾಯಿ ಸ್ಫೂರ್ತಿರವರು ವಿ.ಟಿ.ಯು ನಡೆಸಿದ **Telecommunication engineering** ವಿಭಾಗದಲ್ಲಿ 7ನೇ ರ್‍ಯಾಂಕ್ ಪಡೆದಿರುತ್ತಾರೆ.

***************************



ಸಂಘದ ಸದಸ್ಯ ಶ್ರೀ ಹೆಚ್.ಆರ್. ಬದರಿನಾರಾಯಣ್ ಮತ್ತು ಶ್ರೀಮತಿ ವಾಗ್ದೇವಿ ದಂಪತಿಗಳ ಪುತ್ರಿ ಡಾ॥ ಮೇಘನಾ ಬಿ. ನಾರಾಯಣ್‌ರವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಎಂ.ಡಿ. ಪರೀಕ್ಷೆಯ ಅರಿವಳಿಕೆ ಚಿಕಿತ್ಸೆ ವಿಭಾಗದಲ್ಲಿ 9ನೇ ರ್‍ಯಾಂಕ್ ಪಡೆದಿರುತ್ತಾರೆ.

**ಸಂಘವು ಈ ಪ್ರತಿಭೆಗಳನ್ನು ಅಭಿನಂದಿಸಿ ಹಾರೈಸುತ್ತದೆ.**

*****************************************************************************************

## ಕಾಚರಕನಹಳ್ಳಿಯಲ್ಲಿರುವ ದೇವಸ್ಥಾನದ ಸಮುಚ್ಚಯದಲ್ಲಿರುವ ಛಾಯಾಚಿತ್ರಗಳು

(ವಿವರ : ಪುಟ 19)











## ಅಭಿನಂದನೆಗಳು




ಸಂಘದ ಸದಸ್ಯ ಖಂಜಿರ ವಿದ್ವಾನ್ ಶ್ರೀ ಆರ್. ಕಾರ್ತಿಕ್‌ರವರು ದಿನಾಂಕ 18.3.2023ರಂದು ಸ್ವಿಸ್ ಇಂಟರ್ನ್ಯಾಶನಲ್ ಸ್ಕೂಲ್, ದುಬೈನಲ್ಲಿ ನಡೆದ ತ್ಯಾಗರಾಜರ ಆರಾಧನಾ ಮಹೋತ್ಸವದಲ್ಲಿ ಪಾಲ್ಗೊಂಡರು.

****************************



ಸಂಘದ ಸದಸ್ಯೆ ಶ್ರೀಮತಿ ಪದ್ಮಜಾ ರವಿಕುಮಾರ್‌ರವರ ಪುತ್ರ ಚಿ. ಲಕ್ಷಿತ್ ಆರ್. ಭಾರದ್ವಾಜ್‌ರವರು "Science Olympiad Foundation ರವರು ಆಯೋಜಿಸಿದ "International General Knowledge Olympiad" ನಲ್ಲಿ ಚಿನ್ನದ ಪದಕವನ್ನು ಪಡೆದಿರುತ್ತಾರೆ.

**ಸಂಘವು ಈ ಪ್ರತಿಭೆಗಳನ್ನು ಅಭಿನಂದಿಸಿ ಹಾರೈಸುತ್ತದೆ.**

****************************************************************************************

## ವಿವಾಹ



ಸಂಘದ ಪೋಷಕ ಶ್ರೀ ಆರ್. ರವಿಶಂಕರ್ ಮತ್ತು ಶ್ರೀಮತಿ ಆರ್.ಎಸ್. ಮಾಲತಿರವರ ಪುತ್ರಿ ಚಿ. ಪದ್ಮಶ್ರೀರವರ ವಿವಾಹವು ಶ್ರೀಮತಿ ಮೂಕಾಂಬಿಕ ಅಡಿಗ ಮತ್ತು ಶ್ರೀ ಮಂಜುನಾಥ ಅಡಿಗರವರ ಪುತ್ರ ಚಿ. ಸುಬ್ರಹ್ಮಣ್ಯ ಅಡಿಗರವರೊಂದಿಗೆ ದಿನಾಂಕ 2.12.2022ರಂದು ಬೆಂಗಳೂರಿನಲ್ಲಿ ನಡೆಯಿತು.

****************************************************************************************



ಸಂಘದ ಮಹಾಪೋಷಕ ಶ್ರೀ ಎಸ್. ಉಮೇಶ್ ಮತ್ತು ಶ್ರೀಮತಿ ಗಾಯತ್ರಿರವರ ಪುತ್ರ ಚಿ. ಶ್ರೀಧರ್‌ರವರ ವಿವಾಹವು ಸಂಘದ ಮಹಾಪೋಷಕರಾದ ಶ್ರೀ ಆರ್.ಎಸ್. ಗುರುಪ್ರಸಾದ್ ಮತ್ತು ಶ್ರೀಮತಿ ಸುಮಾ ದಂಪತಿಗಳ ಪುತ್ರಿ ಚಿ. ಸಂಪದಾರವರೊಂದಿಗೆ ದಿನಾಂಕ 3.3.2023ರಂದು ಬೆಂಗಳೂರಿನಲ್ಲಿ ನಡೆಯಿತು.

**ಸಂಘವು ನವ ದಂಪತಿಗಳಿಗೆ ಶುಭ ಹಾರೈಸುತ್ತದೆ.**

**Bank Details:**
**Mysore Manjapattur Dravida Bruhachharana Sangha**
**A/c No: 1065101119457, IFSC: CNRB 0001065**
**CANARA BANK, Chandapura Branch, Anekal, Bengaluru Rural.**
**UPI ID NO: 90574090119457@cnrb**

ನಾಗರಾಧನೆ/ಅನ್ನ ಸಂತರ್ಪಣೆ/ವಿದ್ಯಾನಿಧಿ/ಸದಸ್ಯತ್ವ/ AMF ಗಾಗಿ ಈ ಖಾತೆಗೆ ಹಣವನ್ನು ವರ್ಗಾಯಿಸಬಹುದು

*If undelivered please return to :*
*President*
**'Bruhacharana Sangha'**
No. 27/1, Bull Temple Road,
Basavanagudi,
Bengaluru - 560 004.
E-mail : magazines@mmdbs.in
Website : mmdbs.in

To,

Book-Post

Published by Sri B. Subramanyam, President, 'BRUHACHARANA SANGHA', No. 27/1, Bull Temple Road, Basavanagudi, Bengaluru - 560 004.
Printed at Hamsanikethan Prints, No. 126, C.T. Bed, 6th Cross Rd, Banashankari Stage II, Banashankari, Bengaluru - 560070